ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 215 RNI Number : KNKAN/25/A2770 15-08-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :215 ರಾಯಚೂರು 15-08-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಬಾಗಲಕೋಟೆ ಕಾರು ಬ್ಲಾಸ್ಟ್ ಪ್ರಕರಣಕ್ಕೆ ಟ್ವಿಸ್ಟ್: ಹಣಕ್ಕಾಗಿ ವ್ಯಕ್ತಿಯ ಕೊಲೆಗೆ ಸಂಚು, ನಾಲ್ವರು ಅರೆಸ್ಟ್

ಬಾಗಲಕೋಟೆ: ಇತ್ತೀಚೆಗೆ ನಡೆದಿದ್ದ ಕಾರು ಸ್ಫೋಟ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದ್ದು, ಕೊಲೆ ಮಾಡುವ ಉದ್ದೇಶದಿಂದ ಕಾರು ಬ್ಲಾಸ್ಟ್ ಮಾಡಲಾಗಿತ್ತು ಎಂಬ ವಿಷಯ ಬಹಿರಂಗವಾಗಿದೆ. ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಇನ್ನೋರ್ವನಿಗಾಗಿ ಶೋಧ ನಡೆಸುತ್ತಿದ್ದಾರೆ.

ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಮಾತನಾಡಿ, ಹಣಕ್ಕಾಗಿ ವ್ಯಕ್ತಿಯೋರ್ವನ ಕೊಲೆ ಮಾಡುವ ಉದ್ದೇಶದಿಂದ ಕಾರು ಸ್ಫೋಟ ಮಾಡಲಾಗಿದೆ. ಜುಲೈ 25ರಂದು ರಾತ್ರಿ 10:45 ಸುಮಾರಿಗೆ ಕಾರ್ ಬ್ಲಾಸ್ಟ್ ಆಗಿತ್ತು. ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಲಾಗಿತ್ತು. ಬಾಂಬ್ ನಿಷ್ಕ್ರಿಯದಳ, ಎಫ್ಎಸ್ಎಲ್ ತಂಡದಿಂದ ಪರಿಶೀಲನೆ ಮಾಡಲಾಗಿತ್ತು. ಪ್ರಾಥಮಿಕವಾಗಿ ಎಫ್ಎಸ್ಎಲ್ ವರದಿ ಪ್ರಕಾರ, ಸ್ಫೋಟಕ ಬಳಸಿದ್ದು ಗೊತ್ತಾಗಿದೆ. ಆದರೆ ಪ್ರಕರಣದ ಆರೋಪಿಗಳು ಪತ್ತೆಯಾಗುವವರೆಗೆ ನಾವು ಮಾಹಿತಿ ನೀಡಿರಲಿಲ್ಲ ಎಂದು ತಿಳಿಸಿದರು.



ಬಾರ್ ಮಾಲೀಕ ಹಣ ಮಂತ ಅಥಣಿ ಕೊಲೆಗೆ ಸಂಚು: ಪ್ರಕರಣದ ಎ1 ಆರೋಪಿ ಶಿವಾನಂದ ಅವರ ದೊಡ್ಡಪ್ಪನಿಗೆ ಸ್ಫೋಟಗೊಂಡಿದ್ದ ಕಾರಿನ ಮಾಲೀಕ (ಬಾರ್‌ಮಾಲೀಕ) ಹನಮಂತ 40 ಲಕ್ಷ ರೂ. ಸಾಲ ಕೊಟ್ಟಿದ್ದರು. ಸಾಲ ವಾಪಸ್ ಕೊಡದೇ ಇರುವುದಕ್ಕೆ ಶಿವಾನಂದ ಅವರ 5 ಎಕರೆ ಜಮೀನನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದರು. ಅದೇ ಜಮೀನನ್ನು ಶಿವಾನಂದ ಲೀಸ್ ಪಡೆದು ವರ್ಷಕ್ಕೊಂದರಂತೆ ಕಂತು ರೂಪದಲ್ಲಿ ಸಾಲ ತೀರಿಸುತ್ತೇನೆ ಅಂತ ಹೇಳಿದ್ದರು. ಒಮ್ಮೆ ಸ್ವಲ್ಪ ಹಣ ವಾಪಸ್ ಕೊಟ್ಟ ಬಳಿಕವೂ, ಬಡ್ಡಿ ಜಾಸ್ತಿ ಆಗಿ ಒಟ್ಟು 67 ಲಕ್ಷ ರೂ. ಸಾಲ ಆಗಿತ್ತು. ಇದರಿಂದ ಹನಮಂತನನ್ನು ಕೊಲೆ ಮಾಡಿದರೆ, ಜಮೀನು ತಮಗೆ ಸಿಗುತ್ತೆ ಅಂತ ಪ್ಲಾನ್ ಮಾಡಿದ್ದರು ಎಂದು ಎಸ್ಪಿ ಮಾಹಿತಿ ನೀಡಿದರು.

ಶಿವಾನಂದಗೆ ಸ್ಫೋಟಕ ತಯಾರಿಸುವುದು ಗೊತ್ತಿರುತ್ತದೆ. ಹೀಗಾಗಿ ಎರಡು ಅಂಗಡಿಗಳಲ್ಲಿ ಜಿಲೆಟಿನ್ ಕಡ್ಡಿ ಖರೀದಿ ಮಾಡಿ, ಜಮೀನಿನಲ್ಲಿ ಪ್ರಯೋಗ ಮಾಡುತ್ತಾರೆ. ಬಳಿಕ ಸುಮಾರು 800 ಜಿಲೆಟಿನ್ ಕಡ್ಡಿ ಕೆಪಾಸಿಟರ್, ಡಿಟೋನೇಟ್ ಖರೀದಿ ಮಾಡಿರುತ್ತಾರೆ. ಅದರಲ್ಲಿ 25 ರಿಂದ 30 ಕಡ್ಡಿ ಬಳಸಿ ಸ್ಫೋಟಕ ತಯಾರಿಸಿ ಕಾರಿನ ಕೆಳಗೆ ಇಟ್ಟು, ಕೊಲೆ ಮಾಡುವ ಸಂಚು ರೂಪಿಸಿದ್ದರು. 100 ಮೀಟರ್ ದೂರದಲ್ಲಿ ಕೂತು, ಹನಮಂತ ಅವರು ಕಾರು ಹತ್ತುವಾಗ ಬ್ಲಾಸ್ಟ್ ಮಾಡುತ್ತಾರೆ. ಬಳಿಕ ಸ್ಥಳದಲ್ಲಿ ಉಳಿದ ವೈಯರ್ ಸೇರಿದಂತೆ ಸ್ಫೋಟಕ ಅವಶೇಷಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಸಿಸಿಟಿವಿ ಕ್ಯಾಮರಾ ಮತ್ತು ಮೊಬೈಲ್‌ಗಳಲ್ಲಿ ಯಾವುದೇ ಸುಳಿವು ಸಿಗದಂತೆ ಪ್ಲಾನ್ ಮಾಡಿರುವುದು ಕಂಡು ಬಂದಿದೆ ಎಂದು ಎಸ್ಪಿ ಹೇಳಿದರು.

ಪ.ಜಾ.- ಪ.ಪಂ. ಕುಂದುಕೊರತೆ ಸಭೆ

ಸರ್ಕಾರಿ ಸೌಲಭ್ಯಗಳು ದೊರೆಯದಿದ್ದರೆ, ದೌರ್ಜನ್ಯ ಜರುಗುತ್ತಿದರೆ ತಿಳಿಸಿ - ಚಂದ್ರಶೇಖರ್ ನಾಯಕ



ಸಿರವಾರ.ಆ.14-

ರಾಜ್ಯದಲ್ಲಿರುವ ಪ.ಜಾ ಮತ್ತು ಪ.ಪಂಗಡದವರ ಅಭಿವೃದ್ಧಿಗಾಗಿ ಸರ್ಕಾರ ಅನೇಕ ಯೋಜನೆ ಜಾರಿಗೆ ತಂದಿವೆ ಅವುಗಳು ತಲುಪದಿದ್ದಲ್ಲ, ಎಸ್ಸಿ ಎಸ್ಟಿದವರನ್ನ ದೇವಾಲಾಯ, ಹೊಟೇಲ್ ಗಳಿಗೆ ಕರೆದುಕೊಳದೆ, ಜನಾಂಗದವರ ಮೇಲೆ ದೌರ್ಜನ್ಯಗಳು ಜರುಗುತ್ತಿದ್ದರೆ ತಳಿಸಬೇಕು ಎಂದು ಸಿಂಧನೂರು ಡಿವೈಎಸ್ ಪಿ ಚಂದ್ರಶೇಖರ್ ನಾಯಕ ಹೇಳಿಯ.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ.ಜಾ- ಪ.ಪಂ ಜನಾಂಗದ ಕುಂದುಕೊರತೆ ಅಭೆಯ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರತಿ ತಿಂಗಳು ಪ.ಜಾ. ಪ.ಪಂಗಡ ಕುಂದುಕೊರತೆ ಸಭೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ವಾರ್ಡಗಳಿಗೆ ಆಗಮಿಸಿ ಸಭೆ ಮಾಡಲಾಗುವುದು. ಯಾರೆ ಠಾಣೆಗೆ ದೂರು ನೀಡಲು ಬಂದಾಗ ಕಡ್ಡಾಯವಾಗಿ ದೂರು ಸ್ವೀಕರಿಸುತ್ತೆವೆ. ದೂರು ನೀಡಲು ಕ್ಯೂರ್ ಕೋಡ್ -

3 ನೇ ಪುಟಕ್ಕೆ

ಬಾಕಿ ವೇತನ ಪಾವತಿಗೆ ಆಗ್ರಹಿಸಿ ಆರೋಗ್ಯ ಇಲಾಖೆ ಹೊರಗುತ್ತಿಗೆ ನೌಕರರ ಪ್ರತಿಭಟನೆ

ರಾಯಚೂರು,ಆ.14-

ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ ಮತ್ತು ಡಿ ಗ್ರೂಪ್ ಹೊರಗುತ್ತಿಗೆ ನೌಕರರಿಗೆ ಬಾಕಿ ಇರುವ ವೇತನವನ್ನು ಕೂಡಲೇ ಪಾವತಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಯಚೂರು ಜಿಲ್ಲಾ ಆರೋಗ್ಯ ಇಲಾಖೆ ಸಿ ಮತ್ತು ಡಿ ಗ್ರೂಪ್ ಹೊರಗುತ್ತಿಗೆ ನೌಕರರ ಸಂಘ ಹಾಗೂ ಟಿಯುಸಿಐ ಜಿಲ್ಲಾ ಸಮಿತಿ ವತಿಯಿಂದ ಶುಕ್ರವಾರ ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.



ಜಿಲ್ಲೆಯ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳಲ್ಲಿ ನೂರಾರು ಹೊರಗುತ್ತಿಗೆ ನೌಕರರು ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸಕ್ತ ಸಾಲಿನ ಗುತ್ತಿಗೆ ಪಡೆದಿರುವ ಮೆ. ಪಾಮ್ಯುಲರ್ ಎಂಜಿನಿಯರಿಂಗ್ ಏಜೆನ್ಸಿ , ಬಳ್ಳಾರಿ ಸಂಸ್ಥೆಯು ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಪಾಲಿಸುತ್ತಿಲ್ಲ. ವೇತನ ಪಾವತಿ ಕಾಯ್ದೆಯ ಪ್ರಕಾರ ಪ್ರತಿ ತಿಂಗಳ 7ನೇ ತಾರೀಖಿನೊಳಗೆ ಕಾರ್ಮಿಕರಿಗೆ ವೇತನ ಪಾವತಿಸಬೇಕಿದ್ದರೂ, ಸಮಯಕ್ಕೆ ಸರಿಯಾಗಿ ವೇತನ ಪಾವತಿಯಾಗುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ಕುರಿತು ಮೇ 13ರಂದು ಹಾಗೂ ಜೂನ್ 20ರಂದು ಜಿಲ್ಲಾ ಆರೋಗ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿತ್ತು. ವೇತನವನ್ನು ಶೀಘ್ರ ಪಾವತಿಸುವುದಾಗಿ ಇಲಾಖೆ ಭರವಸೆ ನೀಡಿದ್ದರೂ, ಇದುವರೆಗೆ ಹಲವು ನೌಕರರಿಗೆ ಬಾಕಿ ವೇತನ ಪಾವತಿಯಾಗಿಲ್ಲ ಎಂದು ಸಂಘದ ಮುಖಂಡರು ದೂರಿದರು.

ಆಗಸ್ಟ್ 5ರೊಳಗೆ ಬಾಕಿ ಇರುವ ಸಂಪೂರ್ಣ ವೇತನ ಪಾವತಿಸಬೇಕು, ಇಲ್ಲದಿದ್ದರೆ ಆಗಸ್ಟ್ 14ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ

3 ನೇ ಪುಟಕ್ಕೆ

ಗ್ಯಾರಂಟಿ, ಪಿಂಚಣಿ ಯೋಜನೆಗಳಿಗೆ ಅನಗತ್ಯ ದಾಖಲೆ-ಆದಾಯ ಮಿತಿ ಕೈಬಿಡಿ: ಎಸ್‌ಡಿಪಿಐ



ರಾಯಚೂರು,ಆ.14-

ಗ್ಯಾರಂಟಿ ಯೋಜನೆಗಳು ಹಾಗೂ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಿಗೆ ಅನಗತ್ಯ ದಾಖಲೆಗಳು ಮತ್ತು ಅವೈಜ್ಞಾನಿಕ ಆದಾಯ ಮಿತಿಗಳನ್ನು ವಿಧಿಸುವ ಮೂಲಕ ಅರ್ಹ ಬಡ ಫಲಾನುಭವಿಗಳನ್ನು ಯೋಜನೆಗಳಿಂದ ದೂರ ವಿಡುವ ಪ್ರಯತ್ನ ನಡೆಯುತ್ತಿದೆ ಎಂದು ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ ಅಕ್ಬರ್ ಹುಸೇನ್ ನಗುಂಡಿ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹಜ್ಯೋತಿ, ಗೃಹಲಕ್ಷ್ಮಿ ಹಾಗೂ ಶಕ್ತಿ ಯೋಜನೆಗಳ ಅನುಷ್ಠಾನದಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತಿದ್ದು, ಫಲಾನುಭವಿಗಳಿಗೆ ಅನಗತ್ಯ ತೊಂದರೆ ಉಂಟಾಗಿದೆ ಎಂದರು.

ಈಗಾಗಲೇ ಅರ್ಹರೆಂದು ಗುರುತಿಸಲ್ಪಟ್ಟ ಗೃಹಜ್ಯೋತಿ ಫಲಾನುಭವಿಗಳಿಂದ ಮತ್ತೊಮ್ಮೆ ದಾಖಲೆಗಳನ್ನು ಕೇಳುತ್ತಿರುವುದು ಜನರನ್ನು ಸರ್ಕಾರಿ ಕಚೇರಿಗಳಿಗೆ ಅಲೆದಾಡಿಸುವ ಕ್ರಮವಾಗಿದೆ. ಗೃಹಲಕ್ಷ್ಮಿ ಯೋಜನೆಯ ಹಣವೂ ನಿಯಮಿತವಾಗಿ ಜಮೆಯಾಗದೆ, ಬಾಕಿ ಹಣವನ್ನು ಒಟ್ಟಿಗೆ ನೀಡುತ್ತಿರುವುದರಿಂದ ಮಹಿಳೆಯರಲ್ಲಿ ಗೊಂದಲ ಉಂಟಾಗಿದೆ ಎಂದು ದೂರಿದರು.

ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣ

3 ನೇ ಪುಟಕ್ಕೆ

ಆರ್. ನಾಗರಾಜ್ ಮುಂದುವರಿಕೆಗೆ ಜಯ ಕರ್ನಾಟಕ ಆಕ್ಷೇಪ



ರಾಯಚೂರು,ಆ.14-

ಸರ್ಕಾರದ ಆದೇಶದಂತೆ ನಿವೃತ್ತ ಅಧಿಕಾರಿಗಳನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದ ಸೇವೆಯಿಂದ ಬಿಡುಗಡೆಗೊಳಿಸಬೇಕಿದ್ದರೂ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಆರ್ಥಿಕ ನಿರ್ದೇಶಕರ ಹುದ್ದೆಯಲ್ಲಿ ನಿವೃತ್ತ ಅಧಿಕಾರಿ ಆರ್. ನಾಗರಾಜ್ ಅವರನ್ನು ಮುಂದುವರಿಸಿರುವುದು ಸರಿಯಲ್ಲ ಎಂದು ಜಯ ಕರ್ನಾಟಕ ಜಿಲ್ಲಾಧ್ಯಕ್ಷ ಎಸ್. ಶಿವಕುಮಾರ್ ಯಾದವ್ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಆರ್. ನಾಗರಾಜ್ ಅವರು ನಿವೃತ್ತರಾದ ಬಳಿಕವೂ ಹಲವು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಆರ್ಥಿಕ ನಿರ್ದೇಶಕರ ಹುದ್ದೆಯಲ್ಲಿ ಮುಂದುವರಿದಿದ್ದಾರೆ. 2018ರಲ್ಲಿ ಎರಡು ವರ್ಷಗಳ ಅವಧಿಗೆ ನೇಮಕಗೊಂಡ ಅವರನ್ನು 2020ರಲ್ಲಿ ಮತ್ತೆ ಎರಡು ವರ್ಷಗಳ ಅವಧಿಗೆ ಮುಂದುವರಿಸಲಾಗಿತ್ತು. ನಂತರ 2022ರಲ್ಲಿಯೂ ಮುಂದಿನ ಆದೇಶದವರೆಗೆ ಸೇವೆ ಮುಂದುವರಿಸಲು ಸರ್ಕಾರ ಅನುಮತಿ ನೀಡಿರುವ ದಾಖಲೆಗಳಿವೆ ಎಂದರು.

ನಿಗಮದಲ್ಲಿ ಖಾಯಂ ಆರ್ಥಿಕ ನಿರ್ದೇಶಕರ ನೇಮಕಕ್ಕೆ 2022ರಲ್ಲಿ ಶೋಧನಾ ಸಮಿತಿ ರಚಿಸಿ, ಗುತ್ತಿಗೆ ಅಥವಾ ಡೆಪ್ಯುಟೇಷನ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ನಾಲ್ವರು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರೂ ಅಂತಿಮ ಆಯ್ಕೆಪಟ್ಟಿ ಪ್ರಕಟಿಸದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿಗಳ ಆದೇಶಕ್ಕೂ ಮನ್ನಣೆ ಇಲ್ಲವೇ? 2024ರ ಜನವರಿಯಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ

3 ನೇ ಪುಟಕ್ಕೆ


155 ವರ್ಷಗಳ ಆಭರಣ ಪರಂಪರೆ ರಾಯಚೂರಿಗೆ

ಚೆಟ್ಟಿ ಗ್ರೂಪ್‌ನ ವಿಶೇಷ ಪ್ರದರ್ಶನ ಆರಂಭ

ರಾಯಚೂರು,ಆ.14-

ಆ.14: 155 ವರ್ಷಗಳ ಸುದೀರ್ಘ ಪರಂಪರೆ, ಅಪರೂಪದ ವಿನ್ಯಾಸ ಹಾಗೂ ಅಸಾಧಾರಣ ಕರಕುಶಲತೆಗೆ ಹೆಸರುವಾಸಿಯಾದ ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್‌ನ ವಿಶೇಷ ಆಭರಣ ಪ್ರದರ್ಶನ ನಗರದ ಹೋಟೆಲ್ ರಂಜಿತಾ ಪ್ಯಾಲೇಸ್‌ನಲ್ಲಿ ಶುಕ್ರವಾರ ಆರಂಭವಾಗಿದೆ.

ಆ.14ರಿಂದ 17ರವರೆಗೆ ನಡೆಯಲಿರುವ ನಾಲ್ಕು ದಿನಗಳ ಪ್ರದರ್ಶನದಲ್ಲಿ ಅಪರೂಪದ ಆಭರಣಗಳೊಂದಿಗೆ ಗ್ರಾಹಕರಿಗೆ ವಿಶೇಷ ರಿಯಾಯಿತಿಯನ್ನೂ ನೀಡಲಾಗುತ್ತಿದೆ.ರಾಯಚೂರು



ಬಿಜೆಪಿ ಮಹಿಳಾ ವಿಭಾಗದ ಜಿಲ್ಲಾ ಅಧ್ಯಕ್ಷೆ ಜಿ. ವಿಜಯರಾಜೇಶ್ವರಿ ಜ್ಯೋತಿ ಬೆಳಗಿಸುವ ಮೂಲಕ ಪ್ರದರ್ಶನಕ್ಕೆ ಚಾಲನೆ ನೀಡಿದರು. 155 ವರ್ಷಗಳ ಶ್ರೀಮಂತ ಇತಿಹಾಸ ಹೊಂದಿರುವ ಸಂಸ್ಥೆ ತನ್ನ ವಿಶಿಷ್ಟ ಕಲಾತ್ಮಕತೆ ಮತ್ತು ಕರಕುಶಲತೆಯನ್ನು ರಾಯಚೂರಿಗೆ ತಂದಿರುವುದು ಸಂತಸದ ಸಂಗತಿ.

ಪ್ರತಿಯೊಂದು ಆಭರಣದಲ್ಲೂ ಸಂಪ್ರದಾಯ, ಭಾವನೆ ಹಾಗೂ ಕಲಾತ್ಮಕತೆಯ ಸೊಬಗು ಕಾಣಬಹುದು ಎಂದು ತಿಳಿಸಿದರು. ಆಭರಣ ಕ್ಷೇತ್ರದಲ್ಲಿ 155 ವರ್ಷಗಳ ಪರಂಪರೆ ಹೊಂದಿರುವ ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಗುಣಮಟ್ಟ ಮತ್ತು ವಿಶಿಷ್ಟ ವಿನ್ಯಾಸಗಳಿಗೆ ಹೆಸರಾಗಿದೆ. ರಾಜಮನೆತನಗಳು ಸೇರಿದಂತೆ ದೇಶದ ಆಭರಣ ಪ್ರಿಯರಿಗೆ ವಿಶೇಷ ವಿನ್ಯಾಸಗಳನ್ನು ಒದಗಿಸಿರುವ ಸಂಸ್ಥೆ, ಇದೀಗ ರಾಯಚೂರಿನ ಗ್ರಾಹಕರಿಗಾಗಿ ತನ್ನ ಅಪರೂಪದ ಸಂಗ್ರಹವನ್ನು ಪ್ರದರ್ಶಿಸುತ್ತಿದೆ.

ಪ್ರದರ್ಶನದಲ್ಲಿ ಶುದ್ಧ ಚಿನ್ನ, ಮುತ್ತು, ಅಮೆಥಿಸ್ಟ್, ಪಚ್ಚೆ,

3 ನೇ ಪುಟಕ್ಕೆ

ಕಸಾಪ ಅಧ್ಯಕ್ಷರ ಅಧಿಕಾರಾವಧಿ ಮೂರು ವರ್ಷಕ್ಕೆ ಸೀಮಿತಗೊಳಿಸಿ: ಅಣ್ಣಪ್ಪ ಮೇಟಿಗೌಡ



ರಾಯಚೂರು,ಆ.14-

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರ ಅಧಿಕಾರಾವಧಿಯನ್ನು ಪ್ರಸ್ತುತ ಐದು ವರ್ಷದಿಂದ ಮತ್ತೆ ಮೂರು ವರ್ಷಕ್ಕೆ ಇಳಿಸಿ, ಬೈಲಾ ತಿದ್ದುಪಡಿ ಮೂಲಕ ಮೂರು ವರ್ಷಕ್ಕೆ ಮಾತ್ರ ಸೀಮಿತಗೊಳಿಸಬೇಕು ಎಂದು ಬೆಳಕು ಸಂಸ್ಥೆಯ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಡು-ನುಡಿಯ ಸೇವೆಗಾಗಿ ಭಾಷಾ ತಜ್ಞರು, ಸಾಹಿತಿಗಳು ಹಾಗೂ ಸಾಹಿತ್ಯ ಪಂಡಿತರ ಸಲಹೆ, ಮಾರ್ಗದರ್ಶನದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯನಿರ್ವಹಿಸುತ್ತಿದೆ. ಪರಿಷತ್ತಿನ ಕಾರ್ಯಚಟುವಟಿಕೆಗಳು ಹಾಗೂ ನಿರ್ಣಯಗಳು ಪರಿಣಾಮಕಾರಿಯಾಗಿ ಜಾರಿಯಾಗಲು ಆಡಳಿತದಲ್ಲಿ ಹೊಸ ಚಿಂತನೆ ಮತ್ತು ಹೊಸ ನಾಯಕತ್ವಕ್ಕೆ ಅವಕಾಶ ಕಲ್ಪಿಸುವ ಅಗತ್ಯವಿದೆ ಎಂದರು.

ಅಧ್ಯಕ್ಷರ ಅಧಿಕಾರಾವಧಿಯನ್ನು ಮೂರು ವರ್ಷಕ್ಕೆ ನಿಗದಿಪಡಿಸುವ ಸಂಪ್ರದಾಯ ಮೈಸೂರು ಅರಸರ ಕಾಲದಿಂದಲೂ ಮುಂದುವರಿದು, ಇತ್ತೀಚಿನವರೆಗೂ ಪಾಲನೆಯಾಗುತ್ತಿತ್ತು. ಆದರೆ 2018ರ ಮಾರ್ಚ್ 15ರಂದು ಉಡುಪಿ ಜಿಲ್ಲೆಯ ಕೋಟಾದಲ್ಲಿ ನಡೆದ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷರ ಅಧಿಕಾರಾವಧಿಯನ್ನು ಮೂರು ವರ್ಷದಿಂದ ಐದು ವರ್ಷಕ್ಕೆ ವಿಸ್ತರಿಸುವ ನಿರ್ಣಯ ಕೈಗೊಳ್ಳಲಾಗಿದೆ. ಈ

3 ನೇ ಪುಟಕ್ಕೆ

ಮಹಿಳಾ, ಮಕ್ಕಳ ಕಲ್ಯಾಣ ಯೋಜನೆಗಳು ಕಾಗದಕಷ್ಟೇ ಸೀಮಿತವಾಗದಿರಲಿ: ಕಲಬುರಗಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್



ಕಲಬುರಗಿ,ಆ.14-

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಯೋಜನೆಗಳು ಕೇವಲ ಕಾಗದದ ವರದಿಗಳಿಗೆ ಸೀಮಿತವಾಗದೆ, ಅರ್ಹ ಫಲಾನುಭವಿಗಳಿಗೆ ನೇರವಾಗಿ ತಲುಪುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ವಿವಿಧ ಯೋಜನೆಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಾಗೃತಿ ಕಾರ್ಯಕ್ರಮಗಳು ಕೇವಲ ಸಭಾಂಗಣಕ್ಕೆ ಸೀಮಿತವಾಗಬಾರದು. ಪ್ರತಿಯೊಂದು ಕಾರ್ಯಕ್ರಮದಲ್ಲೂ ಕನಿಷ್ಠ 100ಕ್ಕೂ ಹೆಚ್ಚು ಜನರು ಭಾಗವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ವೈಯಕ್ತಿಕ ಜವಾಬ್ದಾರಿ ವಹಿಸಬೇಕು ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಹಾಗೂ ಶಾಲಾ-ಕಾಲೇಜು ಮಟ್ಟದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಜಾಗೃತಿ ಕಾರ್ಯಕ್ರಮಗಳು ಕೇವಲ ಕಾಗದದ ವರದಿಗಳಿಗೆ ಸೀಮಿತವಾಗಿರುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪ್ರತಿಯೊಂದು ಜಾಗೃತಿ ಕಾರ್ಯಕ್ರಮದಲ್ಲೂ ಕನಿಷ್ಠ 100ಕ್ಕೂ ಹೆಚ್ಚು ಸಾರ್ವಜನಿಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸುವುದನ್ನು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಖಾತರಿಪಡಿಸಬೇಕು. ಕಾರ್ಯಕ್ರಮದ ಉದ್ದೇಶ ಹಾಗೂ ಇಲಾಖೆಯ ಯೋಜನೆಗಳ ಪ್ರಯೋಜನಗಳು ನಿಜವಾದ ಫಲಾನುಭವಿಗಳಿಗೆ ತಲುಪುವಂತೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದರು.

ಕ್ಷೇತ್ರಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ತಮ್ಮ ಕಾರ್ಯಕ್ರಮಗಳ ನೈಜತೆಯನ್ನು ದೃಢಪಡಿಸಲು ಜಿಪಿಎಸ್ ಆಧಾರಿತ, ಸಮಯ ಮತ್ತು ದಿನಾಂಕ ನಮೂದಾಗಿರುವ ಛಾಯಾಚಿತ್ರಗಳೊಂದಿಗೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಬೇಕು. ಅಧಿಕಾರಿಗಳ ದೈನಂದಿನ ಹಾಜರಾತಿಯನ್ನು ಕರ್ತವ್ಯ ಆಪ್‌ನಲ್ಲಿ ಕಡ್ಡಾಯವಾಗಿ ನಿಖರವಾಗಿ ನಮೂದಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಜಿಲ್ಲೆಯ ಸಾಂತ್ವನ ಕೇಂದ್ರಗಳು ಹಾಗೂ ಶಕ್ತಿ ಸದನಗಳ (ಸ್ವಾಧಾರ್ ಗೃಹ) ನಿರ್ವಹಣೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಮುಂದಿನ 15 ದಿನಗಳೊಳಗಾಗಿ ಎಲ್ಲ ಕೇಂದ್ರಗಳಲ್ಲಿ ಆಧಾರ್ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಹಾಗೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಿಸಿಟಿವಿ ದೃಶ್ಯಗಳ ಲೈವ್‌ಸ್ಟ್ರೀಮಿಂಗ್ ಅನ್ನು ಮೇಲಾಧಿಕಾರಿಗಳ ಮೊಬೈಲ್‌ಗೆ ಸಂಪರ್ಕ ಕಲ್ಪಿಸದ ಕೇಂದ್ರಗಳ ಅನುದಾನವನ್ನು ತಡೆಹಿಡಿಯಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರಸ್ತುತ ಖಾಸಗಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಾಧಾರ್ ಗೃಹವನ್ನು ಸೂಕ್ತ ಸರ್ಕಾರಿ ಸ್ವಂತ ಕಟ್ಟಡಕ್ಕೆ ತಕ್ಷಣವೇ ಸ್ಥಳಾಂತರಿಸುವಂತೆ ಸೂಚಿಸಿದರು. ಇದರಿಂದ ಸರ್ಕಾರದ ಹಣ ಉಳಿತಾಯವಾಗುವುದರ ಜತೆಗೆ ನಿವಾಸಿಗಳಿಗೆ ಉತ್ತಮ ಹಾಗೂ ಸುರಕ್ಷಿತ ವಾತಾವರಣ ಕಲ್ಪಿಸಲು ಸಾಧ್ಯವಾಗಲಿದೆ ಎಂದರು.

ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಶಾರೀರಿಕ ಬೆಳವಣಿಗೆ ಹಾಗೂ ಅಪೌಷ್ಟಿಕತೆ ಅಳೆಯಲು ಬಳಸಲಾಗುವ ತೂಕದ ಯಂತ್ರಗಳು, ಸ್ಟೇಡಿಯೋಮೀಟರ್ ಹಾಗೂ ಇನ್ಫಾಂಟೋಮೀಟರ್ ಉಪಕರಣಗಳ ಸ್ಥಿತಿಗತಿಯನ್ನು ತಕ್ಷಣ ಪರಿಶೀಲಿಸಬೇಕು. ಕೆಟ್ಟುಹೋಗಿರುವ ಉಪಕರಣಗಳ ಪಟ್ಟಿಯನ್ನು ಸಿದ್ಧಪಡಿಸಿ, ಹೊಸ ಉಪಕರಣಗಳ ಖರೀದಿಗೆ ಅಗತ್ಯ ವರದಿ ಸಲ್ಲಿಸುವಂತೆ ಡಿ.ಸಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಹಿಳಾ ಸಹಾಯವಾಣಿ 181 ಹಾಗೂ ಮಕ್ಕಳ ಸಹಾಯವಾಣಿ 1098 ಕುರಿತು ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು. ಅಗತ್ಯ ಸಂದರ್ಭದಲ್ಲಿ ಮಹಿಳೆಯರು ಮತ್ತು ಮಕ್ಕಳು ಸಹಾಯವಾಣಿ ಸೇವೆಗಳನ್ನು ಬಳಸಿಕೊಳ್ಳುವಂತೆ ಜಾಗೃತಿ ಮೂಡಿಸುವುದು ಅಗತ್ಯ ಎಂದರು.

ಗರ್ಭಿಣಿ ಹಾಗೂ ಬಾಣಂತಿ ಮಹಿಳೆಯರ ಪೌಷ್ಟಿಕಾಂಶ ಮತ್ತು ಆರೋಗ್ಯ ಸುಧಾರಣೆಗೆ ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಮಾತೃವಂದನಾ ಯೋಜನೆ ಜಾರಿಯಲ್ಲಿದೆ. ಯೋಜನೆಯಡಿ ಮೊದಲ ಮಗುವಿಗೆ ಎರಡು ಕಂತುಗಳಲ್ಲಿ ಒಟ್ಟು ರೂ. 5,000 ಹಾಗೂ ಎರಡನೇ ಮಗು ಹೆಣ್ಣಾಗಿದ್ದರೆ ಒಂದೇ ಕಂತಿನಲ್ಲಿ ರೂ.6,000 ಧನಸಹಾಯ ನೀಡಲಾಗುತ್ತದೆ. ಈ ಮೊತ್ತವನ್ನು ನೇರವಾಗಿ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ. ಸರ್ಕಾರಿ ನೌಕರರು ಹಾಗೂ ಸಾರ್ವಜನಿಕ ಉದ್ದಿಮೆಗಳ ನೌಕರರನ್ನು ಹೊರತುಪಡಿಸಿ, ಉಳಿದ ಅರ್ಹ ಮಹಿಳೆಯರು ಯೋಜನೆಯ ಪ್ರಯೋಜನ ಪಡೆಯಬಹುದು. ಅರ್ಹ ಫಲಾನುಭವಿಗಳಿಗೆ ಯೋಜನೆಯ ಮಾಹಿತಿ ತಲುಪಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಸೌಲಭ್ಯ ದೊರೆಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಸೇಡಂ ಉಪವಿಭಾಗದ ಸಹಾಯಕ ಆಯುಕ್ತ ಪ್ರಭು ರೆಡ್ಡಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹೇಶ್ ಮೇಘಣ್ಣನವರ್ ಡಿಯುಡಿಸಿ ಯೋಜನಾ ನಿರ್ದೇಶಕ ಮುನ್ನವರ ದೌವಲಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ್ ರಾಠೋಡ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶರಣಬಸಪ್ಪ ಕ್ಯಾತ್ನಾಳ, ಜಿಲ್ಲಾ ಸರ್ಜನ್ ಡಾ. ರೂಕಿಯ್ಯಾ ಅಸ್ನ ರಬಾ, ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶರಣಪ್ಪ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಸಿಡಿಪಿಒಗಳು, ಎನ್‌ಜಿಒ ಪ್ರತಿನಿಧಿಗಳು ಹಾಗೂ ವಿವಿಧ ಯೋಜನೆಗಳ ಮಿಷನ್ ಕೋಆರ್ಡಿನೇಟರ್‌ಗಳು ಉಪಸ್ಥಿತರಿದ್ದರು.



ಕೆಕೆಆರ್‌ಟಿಸಿ ಕೇಂದ್ರ ಕಚೇರಿಗೆ ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿ ಭೇಟಿ

ಕಲಬುರಗಿ,ಆ.14-

ಕರ್ನಾಟಕ ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿಯ ಅಧ್ಯಕ್ಷ ಅತುಲ್ ಕುಮಾರ್ ತಿವಾರಿ ನೇತೃತ್ವದ ತಂಡ ಗುರುವಾರ ಕಲಬುರಗಿ ನಗರದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ (ಕೆಕೆಆರ್‌ಟಿಸಿ) ಕೇಂದ್ರ ಕಚೇರಿ, ವಿವಿಧ ಘಟಕಗಳು, ಕೇಂದ್ರ ಬಸ್ ನಿಲ್ದಾಣ ಹಾಗೂ ವಿಭಾಗೀಯ ಕಾರ್ಯಾಗಾರಗಳಿಗೆ ಭೇಟಿ ನೀಡಿ ಸುದೀರ್ಘ ಪರಿಶೀಲನೆ ನಡೆಸಿತು.

ಸಮಿತಿಯ ಸದಸ್ಯರಾದ ಸರ್ಕಾರದ ನಿವೃತ್ತ ಕಾರ್ಯದರ್ಶಿ ದ್ವಾರಕನಾಥ ಬಾಬು ಹಾಗೂ ಡಾ. ಅಬ್ದುಲ್ ಪಿಂಜರಿ ಅವರನ್ನು ಒಳಗೊಂಡ ತಂಡವು ಕೆಕೆಆರ್‌ಟಿಸಿಯ ಕೇಂದ್ರ ಕಚೇರಿ, ಕಲಬುರಗಿ ಘಟಕ-1, ಘಟಕ-2, ಘಟಕ-4, ಕೇಂದ್ರ ಬಸ್ ನಿಲ್ದಾಣ ಹಾಗೂ ವಿಭಾಗೀಯ ಕಾರ್ಯಾಗಾರಗಳಿಗೆ ಭೇಟಿ ನೀಡಿ ನಿಗಮದ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿತು.

ಕೇಂದ್ರ ಕಚೇರಿಯಲ್ಲಿ ಕೆಕೆಆರ್‌ಟಿಸಿಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಮಿತಿ, ನಿಗಮದ ಒಟ್ಟಾರೆ ಕಾರ್ಯಾಚರಣೆ, ಶಕ್ತಿ ಯೋಜನೆಯ ಅನುಷ್ಠಾನ ಹಾಗೂ ಆರ್ಥಿಕ ಸ್ಥಿತಿಗತಿ ಕುರಿತು ಅಧಿಕಾರಿಗಳಿಂದ ವಿವರವಾದ ಮಾಹಿತಿ ಪಡೆದುಕೊಂಡಿತು.

ನಂತರ ವಿವಿಧ ಘಟಕಗಳು ಹಾಗೂ ಕಾರ್ಯಾಗಾರಗಳಿಗೆ ಭೇಟಿ ನೀಡಿದ ಸಮಿತಿಯ ಸದಸ್ಯರು ಬಸ್‌ಗಳ ನಿರ್ವಹಣೆ, ಸ್ವಚ್ಛತೆ, ಡಿಸಿಎಸ್ ತಂತ್ರಾಂಶ ಹಾಗೂ ಸ್ಮಾರ್ಟ್ ಇಟಿಎಂ ಬಳಕೆಯ ಕುರಿತು ಪರಿಶೀಲನೆ ನಡೆಸಿದರು. ಬಸ್‌ಗಳ ಕಾರ್ಯಕ್ಷಮತೆ, ಪ್ರಯಾಣಿಕರಿಗೆ ಒದಗಿಸಲಾಗುತ್ತಿರುವ ಸೇವೆ ಹಾಗೂ ತಾಂತ್ರಿಕ ವ್ಯವಸ್ಥೆಗಳ ಅನುಷ್ಠಾನದ ಬಗ್ಗೆಯೂ ಮಾಹಿತಿ ಪಡೆದರು.

ಕೇಂದ್ರ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ಸಮಿತಿ ಸದಸ್ಯರು ಪ್ರಯಾಣಿಕರು ಹಾಗೂ ಚಾಲನಾ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿ, ಸಾರ್ವಜನಿಕ ಸಾರಿಗೆ ಸೇವೆಯ ಗುಣಮಟ್ಟ, ಪ್ರಯಾಣಿಕರ ಸಮಸ್ಯೆಗಳು ಹಾಗೂ ಸಿಬ್ಬಂದಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಅಭಿಪ್ರಾಯಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕಿ ಡಾ. ಸುಶೀಲಾ ಬಿ., ಮುಖ್ಯ ಸಂಚಾರ ವ್ಯವಸ್ಥಾಪಕ ಸಂತೋಷಕುಮಾರ ವಿ.ಹೆಚ್., ಮುಖ್ಯ ಯಾಂತ್ರಿಕ ಅಭಿಯಂತರ ಸಂತೋಷ್ ಗೋಗೇರಿ, ಮುಖ್ಯ ಲೆಕ್ಕಾಧಿಕಾರಿ ಬಸವರಾಜ ಬೆಳಗಾವಿ, ಉಪಮುಖ್ಯ ಯೋಜನೆ ಮತ್ತು ಸಂಖ್ಯಾಧಿಕಾರಿ ಜಗದೀಶ ನಾಯಕ ಸೇರಿದಂತೆ ನಿಗಮದ ವಿವಿಧ ವಿಭಾಗಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮುನಿರಾಬಾದ್ ಡ್ಯಾಂ ಗ್ರಾ.ಪಂ. ವ್ಯಾಪ್ತಿಯ ಬಿ.ಹೊಸಳ್ಳಿ ಕಾಮಗಾರಿ ಸ್ಥಳದಲ್ಲಿ ಕೂಲಿಕಾರರಿಗೆ ಮಾಹಿತಿ

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸದವರು ಕೂಡಲೇ ಗಣತಿ ನಮೂನೆ ಸಲ್ಲಿಸಿ



ಕೊಪ್ಪಳ ಆ.14-

ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಅಂಗವಾಗಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇರುವವರು ಕೂಡಲೇ ಗಣತಿ ನಮೂನೆ ಭರ್ತಿ ಮಾಡಿ ಅಗತ್ಯ ಮಾಹಿತಿ ಸಲ್ಲಿಸಬೇಕು ಎಂದು ಕೊಪ್ಪಳ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ ಅವರು ಕರೆ ನೀಡಿದರು.

ಮುನಿರಾಬಾದ್ ಡ್ಯಾಂ ಗ್ರಾಮ ಪಂಚಾಯಿತಿಯ ವತಿಯಿಂದ ಆಗಸ್ಟ್ 13ರಂದು ಬಿ.ಹೊಸಳ್ಳಿ ಗ್ರಾಮದ ಕೆರೆ ಪುನಶ್ಚೇತನ ಕಾಮಗಾರಿ ಸ್ಥಳದಲ್ಲಿ ಕೂಲಿಕಾರರಿಗೆ ಆಯೋಜಿಸಿದ್ದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತ ಮಾಹಿತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗಾಗಲೇ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಎಸ್‌ಐಆರ್ ಪ್ರಕ್ರಿಯೆ ನಡೆಸಿದ್ದಾರೆ. ವಲಸೆ ಹೋಗಿರುವವರು ಹಾಗೂ ಈವರೆಗೆ ಗಣತಿ ನಮೂನೆ ಭರ್ತಿ ಮಾಡದವರು ಕೂಡಲೇ ನಮೂನೆ ಭರ್ತಿ ಮಾಡಿ ಸಲ್ಲಿಸಬೇಕು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಎಎಸ್‌ಎಸ್‌ಡಿ ಪಟ್ಟಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಓದಿದರು.

ವಿಬಿಜಿರಾಮ್ ಜೀ ಯೋಜನೆಯಡಿ 125 ದಿನಗಳ ಕೆಲಸ: ಗ್ರಾಮೀಣ ಪ್ರದೇಶದ ಕೂಲಿಕಾರರು ಗುಳೆ ಹೋಗುವುದನ್ನು ತಡೆದು, ಪ್ರತಿ ಕುಟುಂಬಕ್ಕೆ ಸ್ಥಳೀಯವಾಗಿಯೇ 125 ದಿನಗಳ ಕೂಲಿ ಕೆಲಸ ಒದಗಿಸುವುದು ವಿಬಿಜಿರಾಮ್ ಜೀ ಯೋಜನೆಯ ಉದ್ದೇಶವಾಗಿದೆ. ಯೋಜನೆಯಡಿ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಕೂಲಿ ನಿಗದಿಪಡಿಸಲಾಗಿದೆ. ಜಲ ಸಂರಕ್ಷಣೆ, ನೀರಾವರಿ, ಅಂತರ್ಜಲ ಮರುಪೂರಣ, ಜಲಾನಯನ ಪ್ರದೇಶಗಳ ಅಭಿವೃದ್ಧಿ ಹಾಗೂ ಜಲಮೂಲಗಳ ಪುನಶ್ಚೇತನಕ್ಕೆ ಸಂಬಂಧಿಸಿದ ಕಾಮಗಾರಿಗಳಿಗೆ ಆದ್ಯತೆ ನೀಡಲಾಗಿದೆ ಎಂದರು.

ವಿಕಸಿತ ಗ್ರಾಮ ಪಂಚಾಯತಿಯಿಂದ ವಿಕಸಿತ ಭಾರತದೆಡೆಗೆ ಎಂಬ ಯೋಜನೆಯ ಉದ್ದೇಶ ಈಡೇರಿಸಲು ಎಲ್ಲರೂ ಸಹಕರಿಸಬೇಕು. ಪ್ರಸಕ್ತ ಪ್ರತಿ ಮಾನವ ದಿನಕ್ಕೆ ರೂ.382 ಕೂಲಿ ನಿಗದಿಪಡಿಸಲಾಗಿದ್ದು, ಕೂಲಿಕಾರರು ಅಳತೆಗೆ ಅನುಗುಣವಾಗಿ ಕೆಲಸ ನಿರ್ವಹಿಸಬೇಕು. ಕೂಲಿ ಹಣವನ್ನು ಮಾಡಿದ ಕೆಲಸದ ಅಳತೆಗೆ ಅನುಗುಣವಾಗಿ ಪಾವತಿಸಲಾಗುತ್ತದೆ ಎಂದು ಹೇಳಿದರು.

ವೈಯಕ್ತಿಕ ಕಾಮಗಾರಿಗಳಾದ ಜಾನುವಾರು ಶೆಡ್, ಮೇಕೆ ಶೆಡ್, ಕೃಷಿಹೊಂಡ, ಬದು ನಿರ್ಮಾಣ, ಕೋಳಿ ಶೆಡ್ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದ್ದು, ಇದರ ಸದುಪಯೋಗ ಪಡೆದುಕೊಂಡು 125 ದಿನಗಳ ಕೆಲಸ ನಿರ್ವಹಿಸಬೇಕು.

ಜಮೀನು ಇಲ್ಲದವರು ಗ್ರಾಮ ಪಂಚಾಯಿತಿಯಿಂದ ಕೈಗೊಳ್ಳುವ ಸಾಮೂಹಿಕ ಕಾಮಗಾರಿಗಳಲ್ಲಿ ಕೂಲಿ ಕೆಲಸ ನಿರ್ವಹಿಸಿ ಆರ್ಥಿಕವಾಗಿ ಸಬಲರಾಗಬೇಕು ಎಂದು ಕರೆ ನೀಡಿದರು.

ಹೊಸದಾಗಿ ನೋಂದಣಿಯಾದ ಕುಟುಂಬಗಳಿಗೆ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಲಾಗುವುದು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕಿ (ಗ್ರಾ.ಉ) ಸೌಮ್ಯ ಕೆ., ತಾಲೂಕು ಐಇಸಿ ಸಂಯೋಜಕ ದೇವರಾಜ ಪತ್ತಾರ, ತಾಂತ್ರಿಕ ಸಂಯೋಜಕ ಯಮನೂರ, ತಾಂತ್ರಿಕ ಸಹಾಯಕ ಪ್ರಕಾಶ ಸಜ್ಜನ, ಬೇರ್‌ಫೂಟ್ ಟೆಕ್ನಿಷಿಯನ್ ರಾಮಣ್ಣ, ಕಾಯಕ ಬಂಧುಗಳು ಹಾಗೂ ಕೂಲಿಕಾರರು ಉಪಸ್ಥಿತರಿದ್ದರು.

ಸಮತೋಲಿತ ಪೋಷಕಾಂಶಗಳ ನಿರ್ವಹಣೆ: ರೈತರಿಗೆ ತರಬೇತಿ



ಕೊಪ್ಪಳ ಆ.14-

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ, ಕೃಷಿ ಇಲಾಖೆ ಹಾಗೂ ಕೋರಮಂಡಲ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇವರ ಸಹಯೋಗದಲ್ಲಿ ''ಸಮತೋಲಿತ ಪೋಷಕಾಂಶಗಳ ನಿರ್ವಹಣೆ'' ಕುರಿತು ತರಬೇತಿ ಕಾರ್ಯಕ್ರಮವನ್ನು ಆಗಸ್ಟ್ 13ರಂದು ಆಯೋಜಿಸಲಾಗಿತ್ತು.

ಜಂಟಿ ಕೃಷಿ ನಿರ್ದೇಶಕರಾದ ಕೃಷ್ಣಮೂರ್ತಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿ, ಕೃಷಿ ಉತ್ಪನ್ನಗಳಲ್ಲಿ ಸಾವಯವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆಯಿದ್ದು, ರೈತರು ರಾಸಾಯನಿಕ ಗೊಬ್ಬರಗಳ ಅವಲಂಬನೆ ಕಡಿಮೆ ಮಾಡಿ ತಮ್ಮದೇ ಆದ ಸಾವಯವ ಪರಿಕರಗಳನ್ನು ತಯಾರಿಸಿಕೊಳ್ಳುವ ಮೂಲಕ ಸ್ವಾವಲಂಬಿಗಳಾಗಬೇಕು ಎಂದು ಕರೆ ನೀಡಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಕೃಷ್ಣ ಉಕ್ಕುಂದ ಅವರು ಮಾತನಾಡಿ, ತೋಟಗಾರಿಕೆ ಬೆಳೆಗಳಿಗೆ ಸಮತೋಲಿತ ಪೋಷಕಾಂಶಗಳನ್ನು ಒದಗಿಸುವುದರಿಂದ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಪಡೆಯಲು ಸಾಧ್ಯ. ರೈತರು ತಮ್ಮ ಜಮೀನಿನ ಕನಿಷ್ಠ ಅರ್ಧದಷ್ಟು ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಅಗತ್ಯ ಸಾವಯವ ಒಳಸುರಿಗಳನ್ನು ತಾವೇ ಉತ್ಪಾದಿಸಿಕೊಳ್ಳಬೇಕು ಎಂದರು.

ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ ಕುಲಕರ್ಣಿ ಅವರು ಇಲಾಖೆಯ ವಿವಿಧ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡುವುದರ ಜೊತೆಗೆ ಮೀನಿನ ಅಮೈನೋ ಆಮ್ಲ ಉತ್ಪಾದನೆ ಕುರಿತು ವಿವರಿಸಿದರು.

ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಮುಖ್ಯಸ್ಥರಾದ ಡಾ. ಬದರಿಪ್ರಸಾದ ಪಿ.ಆರ್. ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೊಪ್ಪಳ ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ವಿರುಪಣ್ಣ (ನವೋದಯ) ಹಳ್ಳಿಗುಡಿ ಅವರು ಮಾತನಾಡಿ, ರೈತಪರ ತರಬೇತಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಇಂತಹ ಕಾರ್ಯಕ್ರಮಗಳಿಗೆ ಅಗತ್ಯ ಆರ್ಥಿಕ ಸಹಕಾರವನ್ನು ಕೃಷಿಕ ಸಮಾಜ ನೀಡಲಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿದ್ದ ಮಲ್ಲೇಶಪ್ಪ ಬಿಸಿರೊಟ್ಟಿ ಅವರು ತಮ್ಮ ಪಾರಂಪರಿಕ ಜ್ಞಾನವನ್ನು ಹಂಚಿಕೊಂಡು, ಘನ ಜೀವಾಮೃತ ತಯಾರಿಕೆ, ಬಳಕೆ ಹಾಗೂ ಅದರ ಪ್ರಯೋಜನಗಳ ಕುರಿತು ರೈತರಿಗೆ ಮಾಹಿತಿ ನೀಡಿದರು. ಕೋರಮಂಡಲ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಅವಿನಾಶ್ ಅವರು ನ್ಯಾನೋ ಯೂರಿಯಾ, ಡಿಎಪಿ ಗೊಬ್ಬರಗಳ ಬಳಕೆ ಹಾಗೂ ಕೃಷಿಯಲ್ಲಿ ಡ್ರೋನ್ ಬಳಕೆಯ ಕುರಿತು ವಿವರಿಸಿದರು.

ಕೃಷಿಯೋಗ್ಯ ಭೂಮಿ ಪ್ರಮಾಣ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ರೈತರು ಮಣ್ಣಿನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಮಣ್ಣಿನ ಆರೋಗ್ಯ ಕಾಪಾಡುವ ಸಾವಯವ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕೇಂದ್ರವು ಪ್ರತಿ ತಿಂಗಳು ತರಬೇತಿ ಕಾರ್ಯಕ್ರಮ ಆಯೋಜಿಸುತ್ತಿದ್ದು, ರೈತರು ಸಕ್ರಿಯವಾಗಿ ಪಾಲ್ಗೊಂಡು ಇದರ ಪ್ರಯೋಜನ ಪಡೆದು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಕುರಿತು ಕೃಷಿ ವಿಜ್ಞಾನಿ ಡಾ. ಶೇಷಗಿರಿ ಗುಬ್ಬಿ ಅವರು ಅಭಿಪ್ರಾಯ ಹಂಚಿಕೊಡರು. ಕೊಪ್ಪಳ ಸಾವಯವ ಕೃಷಿಕರ ಬಳಗದ ಸದಸ್ಯ ದೇವರಾಜ ಮೇಟಿ ಕಾರ್ಯಕ್ರಮ ನಿರೂಪಿಸಿದರು. ತರಬೇತಿ ಕಾರ್ಯಕ್ರಮದಲ್ಲಿ ಕೊಪ್ಪಳ ಹಾಗೂ ವಿಜಯನಗರ ಜಿಲ್ಲೆಗಳಿಂದ 100ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳನ್ನು (ಡಾ. ಬದರಿ ಪ್ರಸಾದ ಪಿ.ಆರ್., ವಿಸ್ತರಣಾ ಮುಂದಾಳು, ಮೊ. 9900145705) ಸಂಪರ್ಕಿಸಬಹುದು.



ಕಲಬುರಗಿಯ ಐತಿಹಾಸಿಕ ತಾಣಗಳಿಗೆ ಘಾನಾ ಪ್ರವಾಸಿಗರ ಭೇಟಿ

ಬುದ್ಧ ವಿಹಾರ, ಬಹಮನಿ ಕೋಟೆ ವೀಕ್ಷಣೆ

ಕಲಬುರಗಿ,ಆ.14-

ಘಾನಾ ದೇಶದ ಪ್ರವಾಸಿಗರ ತಂಡವೊಂದು ಗುರುವಾರ ಕಲಬುರಗಿ ನಗರದ ಪ್ರಮುಖ ಪ್ರವಾಸಿ ತಾಣಗಳಾದ ಬುದ್ಧ ವಿಹಾರ ಹಾಗೂ ಬಹಮನಿ ಕೋಟೆಗೆ ಭೇಟಿ ನೀಡಿ, ಅಲ್ಲಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ವೀಕ್ಷಿಸಿತು.

ಪ್ರವಾಸಿಗರು ಬುದ್ಧ ವಿಹಾರ ಹಾಗೂ ಬಹಮನಿ ಕೋಟೆಯ ವಾಸ್ತುಶಿಲ್ಪ, ಐತಿಹಾಸಿಕ ಹಿನ್ನೆಲೆ ಹಾಗೂ ವಿಶೇಷತೆಗಳನ್ನು ಕುತೂಹಲದಿಂದ ವೀಕ್ಷಿಸಿದರು. ಈ ಸಂದರ್ಭದಲ್ಲಿ ಹವ್ಯಾಸಿ ಪ್ರವಾಸಿ ಮಾರ್ಗದರ್ಶಿಗಳಾದ ನಾರಾಯಣ ಎಂ. ಜೋಶಿ ಹಾಗೂ ಬಿ.ಎಂ. ರಾವೂರ ಅವರು ಪ್ರವಾಸಿಗರಿಗೆ ಕಲಬುರಗಿ ನಗರದ ಐತಿಹಾಸಿಕ ಹಿನ್ನೆಲೆ, ಪ್ರಮುಖ ಪ್ರವಾಸಿ ತಾಣಗಳು ಹಾಗೂ ನಗರದ ಸಾಂಸ್ಕೃತಿಕ ವೈಶಿಷ್ಟ್ಯಗಳ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು.

ವಿದೇಶಿ ಪ್ರವಾಸಿಗರು ಕಲಬುರಗಿಯ ಐತಿಹಾಸಿಕ ಸ್ಮಾರಕಗಳು ಹಾಗೂ ಬುದ್ಧ ವಿಹಾರದ ವೈಶಿಷ್ಟ್ಯಗಳನ್ನು ಮೆಚ್ಚುಗೆ ವ್ಯಕ್ತಪಡಿಸಿ, ಸ್ಥಳೀಯ ಪ್ರವಾಸಿ ತಾಣಗಳ ಕುರಿತು ಮಾಹಿತಿ ಪಡೆದುಕೊಂಡರು.

ಸ್ವಾತಂತ್ರ್ಯ ದಿನಾಚರಣೆ: ಹರ್ ಘರ್ ತಿರಂಗಾ ಅಭಿಯಾನ-2026

ಮನೆ-ಮನೆಗೂ ತ್ರಿವರ್ಣ ಧ್ವಜ ಹಾರಿಸಲು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಕರೆ



ಕೊಪ್ಪಳ ಆ.14-

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆಗಸ್ಟ್ 9 ರಿಂದ 17ರವರೆಗೆ ದೇಶಾದ್ಯಂತ ನಡೆಯಲಿರುವ ''ಹರ್ ಘರ್ ತಿರಂಗಾ-2026'' ಅಭಿಯಾನವನ್ನು ಕೊಪ್ಪಳ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ತಿಳಿಸಿದ್ದಾರೆ.

ಭಾರತ ಸರ್ಕಾರವು 2022ರಲ್ಲಿ ಆರಂಭಿಸಿದ ಹರ್ ಘರ್ ತಿರಂಗಾ ಅಭಿಯಾನದ ಮುಖ್ಯ ಉದ್ದೇಶ ನಾಗರಿಕರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕ ತ್ರಿವರ್ಣ ಧ್ವಜದೊಂದಿಗೆ ವೈಯಕ್ತಿಕ ಹಾಗೂ ಭಾವನಾತ್ಮಕ ಬಾಂಧವ್ಯ ಬೆಳೆಸಿಕೊಳ್ಳುವಂತೆ ಪ್ರೋತ್ಸಾಹಿಸುವುದಾಗಿದೆ. ಈ ಹಿನ್ನೆಲೆಯಲ್ಲಿ ಇದೇ ಆಗಸ್ಟ್ 15ರಂದು ಆಚರಿಸಲಾಗುವ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕೊಪ್ಪಳ ಜಿಲ್ಲೆಯ ಪ್ರತಿಯೊಂದು ಮನೆ, ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳು, ನಿಗಮ-ಮಂಡಳಿಗಳು, ಸ್ವಸಹಾಯ ಗುಂಪುಗಳು, ಸಾರ್ವಜನಿಕ ಉದ್ಯಮ ಸಂಸ್ಥೆಗಳು, ಸಂಘ-ಸಂಸ್ಥೆಗಳು, ನಾಗರಿಕ ಸೇವಾ ಸಂಸ್ಥೆಗಳು, ಶಾಲಾ-ಕಾಲೇಜುಗಳು ಸೇರಿದಂತೆ ಸಾರ್ವಜನಿಕರು, ಅಧಿಕಾರಿಗಳು, ಸಿಬ್ಬಂದಿ ಹಾಗೂ ಕುಟುಂಬ ವರ್ಗದವರು ಸ್ವಯಂಪ್ರೇರಣೆಯಿಂದ ರಾಷ್ಟ್ರಧ್ವಜ ಹಾರಿಸಿ ರಾಷ್ಟ್ರಪ್ರೇಮವನ್ನು ಅಭಿವ್ಯಕ್ತಪಡಿಸುವಂತೆ ಈ ಮೂಲಕ ಕೋರಲಾಗಿದೆ.

ಈ ಅಭಿಯಾನದ ಅಂಗವಾಗಿ ಜಿಲ್ಲೆಯಲ್ಲಿ ತಿರಂಗಾ ರ್‍ಯಾಲಿ, ಸೈಕಲ್ ಜಾಥಾ ಹಾಗೂ ಬೈಕ್ ಜಾಥಾ ಆಯೋಜಿಸಲಾಗುವುದು. ವಿವಿಧ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ಸಂಘ-ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಭಾಗಿತ್ವದಲ್ಲಿ ರಾಷ್ಟ್ರಗೀತೆಗೆ ಸಂಬಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಸಾರ್ವಜನಿಕ ಸ್ಥಳಗಳು, ಅಂಗಡಿ-ಮಳಿಗೆಗಳು, ರೈಲು ಮತ್ತು ಬಸ್ ನಿಲ್ದಾಣಗಳು ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ತಿರಂಗಾ ಪ್ರದರ್ಶನ ಹಾಗೂ ಧ್ವಜಾರೋಹಣಕ್ಕೆ ವ್ಯವಸ್ಥೆ ಮಾಡಲಾಗುತ್ತದೆ. ಸರ್ಕಾರಿ ಕಚೇರಿಗಳು, ಆಣೆಕಟ್ಟುಗಳು, ಸೇತುವೆಗಳು, ರೈಲು ಮತ್ತು ಬಸ್ ನಿಲ್ದಾಣಗಳು, ಆಸ್ಪತ್ರೆಗಳು, ಶಾಲಾ-ಕಾಲೇಜುಗಳು ಸೇರಿದಂತೆ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ದೀಪಾಲಂಕಾರ ಮಾಡಲು ಸೂಚಿಸಲಾಗಿದೆ.

ಇದರೊಂದಿಗೆ ಸಾರ್ವಜನಿಕ ವೃತ್ತಗಳು ಹಾಗೂ ಪಾದಚಾರಿ ಮಾರ್ಗಗಳಲ್ಲಿ ತಿರಂಗಾ ವಿಷಯಾಧಾರಿತ ರಂಗೋಲಿ ಚಿತ್ರಗಳನ್ನು ಬಿಡಿಸುವುದು, ಶಾಲಾ-ಕಾಲೇಜುಗಳಲ್ಲಿ ರಾಷ್ಟ್ರಗೀತೆ ಹಾಡಿಸುವುದು, ತಿರಂಗಾ ಕುರಿತ ಚಿತ್ರಕಲೆ ಸ್ಪರ್ಧೆ, ಸ್ವಾತಂತ್ರ್ಯ ಹೋರಾಟಗಾರರ ಕುರಿತು ರಸಪ್ರಶ್ನೆ ಹಾಗೂ ನಿಬಂಧ ಸ್ಪರ್ಧೆಗಳನ್ನು ಆಯೋಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಭಿಯಾನಕ್ಕೆ ಅಗತ್ಯವಿರುವ ರಾಷ್ಟ್ರಧ್ವಜಗಳ ಸಂಗ್ರಹಣೆ ಮತ್ತು ವಿತರಣೆಗೆ ಸಂಬಂಧಿಸಿದಂತೆ ಕೈಮಗ್ಗ ಮತ್ತು ಜವಳಿ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಲಿದೆ. ತಾಲೂಕು ಮಟ್ಟದಲ್ಲಿ ತಹಶೀಲ್ದಾರರು, ತಾಲೂಕು ಪಂಚಾಯತ್ ಕಾರ್ಯನಿರ್ವಾ ಹಕ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿ ಗಳು, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ಥಳೀಯ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳು ಮತ್ತು ವಿವಿಧ ಸಂಘ-ಸಂಸ್ಥೆಗಳು ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಂತೆ ಸೂಚಿಸಲಾಗಿದೆ.

ಸ್ವಾತಂತ್ರ್ಯವು ಅಸಂಖ್ಯಾತ ಹೋರಾಟ, ತ್ಯಾಗ ಮತ್ತು ಬಲಿದಾನಗಳ ಫಲವಾಗಿದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರಪ್ರೇಮವನ್ನು ಸ್ಮರಿಸಿ, ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಕೊಪ್ಪಳ ಜಿಲ್ಲೆಯ ಎಲ್ಲ ನಾಗರಿಕರು ಸ್ವಯಂಪ್ರೇರಣೆಯಿಂದ ''ಹರ್ ಘರ್ ತಿರಂಗಾ'' ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅಭಿಯಾನ ವನ್ನು ಯಶಸ್ವಿಗೊಳಿಸುವಂತೆ ಅಪರ ಜಿಲ್ಲಾಧಿಕಾರಿಗಳು ಈ ಮೂಲಕ ಮನವಿ ಮಾಡಿದ್ದಾರೆ.

ಆ.18 ರಂದು ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ

ಬಳ್ಳಾರಿ,ಆ.14- ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಸಕ್ತ ಸಾಲಿನ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನದ 1ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ಅಧ್ಯಕ್ಷತೆಯಲ್ಲಿ ಆ.18 ರಂದು ರಂದು ಬೆಳಿಗ್ಗೆ 11 ಗಂಟೆಗೆ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಜು ಅವರು ತಿಳಿಸಿದ್ದಾರೆ.

ಒಂದನೇಯ ಪುಟದಿಂದ

ಅಹೋರಾತ್ರಿ ಧರಣಿಯಲ್ಲಿ ಫಲಾನುಭವಿಗಳು : 2ನೇ ದಿನವೂ ಮುಂದುವರಿದ ಹೋರಾಟ

ಮತ್ತು ವಸತಿ ಸೌಲಭ್ಯಕ್ಕಾಗಿ ಹಲವು ವರ್ಷಗಳಿಂದ ಕಾಯುತ್ತಿವೆ. ಕೆಲವು ಕಡೆ ನಿವೇಶನ ಗುರುತಿಸಿ, ಫಲಾನುಭವಿಗಳ ಪಟ್ಟಿಯನ್ನೂ ಅನುಮೋದಿಸಲಾಗಿದ್ದರೂ ಹಕ್ಕುಪತ್ರ ವಿತರಣೆ ಹಾಗೂ ನಿವೇಶನ ಹಂಚಿಕೆಯಲ್ಲಿ ವಿಳಂಬವಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಕವಿತಾಳ ಪಟ್ಟಣದ ಸರ್ವೆ ನಂ.19/2ರಲ್ಲಿ ಅಲೆಮಾರಿ ಸಮುದಾಯದ ನೂರಕ್ಕೂ ಹೆಚ್ಚು ಫಲಾನುಭವಿಗಳಿಗಾಗಿ 3 ಎಕರೆ 35 ಗುಂಟೆ ಜಮೀನು ಗುರುತಿಸಿ ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲಾಗಿದೆ. ಆದರೆ ಸುಮಾರು ಎಂಟು ತಿಂಗಳು ಕಳೆದರೂ ನಿವೇಶನ ಹಂಚಿಕೆ ಮಾಡಿಲ್ಲ. ಕೂಡಲೇ ಜಮೀನನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಿ ಫಲಾನುಭವಿಗಳಿಗೆ ನಿವೇಶನ, ಹಕ್ಕುಪತ್ರ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಬೇಕು ಎಂದು ದಲಿತ ಸಮರ ಸೇನೆಯ ಮುಖಂಡ ನೀಲಕಂಠ ಅನಿಲ್ ಒತ್ತಾಯಿಸಿದರು.

ಕವಿತಾಳದ ಸರ್ವೆ ನಂ.684ರಲ್ಲಿ ಗುರುತಿಸಿರುವ 4 ಎಕರೆ 5 ಗುಂಟೆ ಜಮೀನಿನಲ್ಲಿ ಸುಮಾರು 183 ಕುಟುಂಬಗಳ ಪುನರ್ವಸತಿಗೆ ಕ್ರಮ ಕೈಗೊಳ್ಳಬೇಕು. ಲಿಂಗಸುಗೂರು ತಾಲೂಕಿನ ಸರ್ವೆ ನಂ.410/1ರಲ್ಲಿ 188 ವಸತಿಹೀನ ಕುಟುಂಬಗಳಿಗಾಗಿ ಕಾಯ್ದಿರಿಸಿರುವ 5 ಎಕರೆ ಜಮೀನನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಿ ಮೂಲಭೂತ ಸೌಕರ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಸಿಂಧನೂರು ತಾಲೂಕಿನ ಜ್ಯೋತಿ ಬಾಪುಲೆರಾಮಕಿಶೋರ್ ಕಾಲೋನಿಯಲ್ಲಿ ಹಲವು ದಶಕಗಳಿಂದ ಕಾಲುವೆ ಪಕ್ಕದಲ್ಲಿ ವಾಸಿಸುತ್ತಿರುವ ಬಡ ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಕುಟುಂಬಗಳಿಗೆ ಸೂಕ್ತ ವಸತಿ ಕಲ್ಪಿಸಿ ಪುನರ್ವಸತಿ ಮಾಡಬೇಕು ಎಂದು ಒತ್ತಾಯಿಸಿದರು.ಮಹಿಳೆಯರು ಮತ್ತು ಚಿಕ್ಕ ಮಕ್ಕಳು ಸೇರಿದಂತೆ ಕುಟುಂಬಸ್ಥರು ಎರಡನೇ ದಿನವೂ ಧರಣಿಯಲ್ಲಿ ಪಾಲ್ಗೊಂಡಿರುವುದು ಹೋರಾಟದ ತೀವ್ರತೆಯನ್ನು ತೋರಿಸಿದ್ದು, ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಧರಣಿಯಲ್ಲಿ ದಲಿತ ಸಮರ ಸೇನೆಯ ಸಂಸ್ಥಾಪಕ ಅಧ್ಯಕ್ಷ ಗಣೇಶ್ ಎಸ್. ಕೊಳಗೇರಿ, ತಿಪ್ಪಣ್ಣ ಎನ್. ಛಲವಾದಿ, ಸುರೇಶ್ ಎಲ್.ವಿ., ನರಸಿಂಹಲು, ಹನುಮೇಶ ಅರೋಲಿ, ಬಸವರಾಜ್, ಅರಿಫಾ, ಶರಣಪ್ಪ, ರಂಗಮ್ಮ, ರಾಬಿಯಾ, ಶಂಕರ್, ರೇಣುಕಮ್ಮ, ರಾಜಮ್ಮ, ಶೈನಾಜ್ ಬೇಗಂ, ಫಾತಿಮಾ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು, ಮುಖಂಡರು, ಮಹಿಳೆಯರು ಹಾಗೂ ಫಲಾನುಭವಿಗಳ ಕುಟುಂಬಸ್ಥರು ಪಾಲ್ಗೊಂಡಿದ್ದರು.

ಚೆಟ್ಟಿ ಗ್ರೂಪ್‌ನ ವಿಶೇಷ ಪ್ರದರ್ಶನ ಆರಂಭ

ಮಾಣಿಕ್ಯ, ವೈಡೂರ್ಯ, ಸಿಟ್ರಿನ್ ಹಾಗೂ ವಜ್ರಗಳಿಂದ ರೂಪಿಸಲಾದ ವೈವಿಧ್ಯಮಯ ಆಭರಣಗಳು ಗಮನ ಸೆಳೆಯುತ್ತಿವೆ. ಸಾಂಪ್ರದಾಯಿಕ ಸೊಬಗಿನಿಂದ ಆಧುನಿಕ ವಿನ್ಯಾಸಗಳವರೆಗೆ ಹಲವು ಮಾದರಿಗಳು ಗ್ರಾಹಕರನ್ನು ಆಕರ್ಷಿಸುತ್ತಿವೆ. ರಾಯಚೂರಿನ ಗ್ರಾಹಕರಿಗೆ ವಿಶೇಷ ರಿಯಾಯಿತಿ ಪ್ರದರ್ಶನದ ಅವಧಿಯಲ್ಲಿ ರಾಯಚೂರಿನ ನಾಗರಿಕರಿಗೆ ವಿಶೇಷ ರಿಯಾಯಿತಿ ನೀಡಲಾಗುತ್ತಿದೆ. ಬೆಳ್ಳಿ ಆಭರಣಗಳ ಮೇಲೆ ಶೇ.2, ಚಿನ್ನದ ಆಭರಣಗಳ ಮೇಲೆ ಶೇ.4 ಹಾಗೂ ವಜ್ರದ ಆಭರಣಗಳ ಮೇಲೆ ಶೇ.6ರಷ್ಟು ರಿಯಾಯಿತಿ ಲಭ್ಯವಿದೆ ಎಂದು ಸಂಸ್ಥೆ ತಿಳಿಸಿದೆ.

ಪ್ರದರ್ಶನದ ಮತ್ತೊಂದು ಪ್ರಮುಖ ಆಕರ್ಷಣೆಯಾಗಿ ಸಂಸ್ಥೆಯ ' crash.club' ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಿದ ವಜ್ರಗಳ ವಿಶೇಷ ಸಂಗ್ರಹವಿದೆ. ಆಧುನಿಕ ತಂತ್ರಜ್ಞಾನ, ಕಲಾತ್ಮಕತೆ ಹಾಗೂ ಸುಸ್ಥಿರತೆಯ ಸಂಯೋಜನೆಯನ್ನು ಈ ಸಂಗ್ರಹ ಪ್ರತಿಬಿಂಬಿಸುತ್ತದೆ. ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್‌ನ ಮಳಿಗೆ ಮುಖ್ಯಸ್ಥ ಸಂತೋಷ್ ಆರ್. ಮಾತನಾಡಿ, ಆಭರಣಗಳು ಕೇವಲ ಆಕರ್ಷಕವಾಗಿ ಕಾಣುವುದಷ್ಟೇ ಅಲ್ಲದೆ ಅರ್ಥಪೂರ್ಣವಾಗಿರಬೇಕು ಎಂಬುದು ಸಂಸ್ಥೆಯ ನಂಬಿಕೆ. ರಾಯಚೂರಿನಲ್ಲಿ ಈ ಹಿಂದೆ ಆಯೋಜಿಸಿದ್ದ ಪ್ರದರ್ಶನಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಗ್ರಾಹಕರೊಂದಿಗೆ ಮತ್ತಷ್ಟು ನಿಕಟ ಸಂಬಂಧ ಬೆಳೆಸುವ ಉದ್ದೇಶದಿಂದ ಈ ಪ್ರದರ್ಶನ ಆಯೋಜಿಸಲಾಗಿದೆ ಎಂದರು. ಪಿಆರ್ ಮುಖ್ಯಸ್ಥ ತೇಜಸ್ ಕಲಾ ಮಾತನಾಡಿ, ರಾಯಚೂರಿನ ಈ ಪ್ರದರ್ಶನ ಕೇವಲ ಆಭರಣಗಳ ಪ್ರದರ್ಶನವಲ್ಲ; 155 ವರ್ಷಗಳ ಪರಂಪರೆ ಮತ್ತು ಆಭರಣ ಕಲೆಯ ಭವಿಷ್ಯದ ನಡುವಿನ ಸೇತುವೆಯಾಗಿದೆ. ಗ್ರಾಹಕರು ಅಪರೂಪದ ವಿನ್ಯಾಸಗಳನ್ನು ನೇರವಾಗಿ ವೀಕ್ಷಿಸಿ ಖರೀದಿಸಲು ಇದು ಉತ್ತಮ ಅವಕಾಶವಾಗಿದೆ ಎಂದರು. ಆಭರಣ ತಜ್ಞರಿಂದ ವೈಯಕ್ತಿಕ ಸಲಹೆ, ಅಪರೂಪದ ಆಭರಣಗಳ ಸಂಗ್ರಹ ಹಾಗೂ ವಿಶೇಷ ರಿಯಾಯಿತಿಗಳು ಪ್ರದರ್ಶನದ ಪ್ರಮುಖ ಆಕರ್ಷಣೆಗಳಾಗಿವೆ. ಹೆಚ್ಚಿನ ಮಾಹಿತಿಗಾಗಿ ಮಳಿಗೆ ಮುಖ್ಯಸ್ಥ ಸಂತೋಷ್ ಆರ್. ಅವರನ್ನು 96861 01869 ಸಂಪರ್ಕಿಸಬಹುದು. ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಗ್ಯಾರಂಟಿ, ಪಿಂಚಣಿ ಯೋಜನೆಗಳಿಗೆ ಅನಗತ್ಯ ದಾಖಲೆ-ಆದಾಯ ಮಿತಿ ಕೈಬಿಡಿ: ಎಸ್‌ಡಿಪಿಐ

ಕಲ್ಪಿಸಲಾಗಿದೆ ಎಂದು ಸರ್ಕಾರ ಹೇಳುತ್ತಿದ್ದರೂ, ಅಗತ್ಯ ಪ್ರಮಾಣದಲ್ಲಿ ಬಸ್‌ಗಳನ್ನು ಹೆಚ್ಚಿಸದ ಕಾರಣ ಕಿಕ್ಕಿರಿದ ಬಸ್‌ಗಳಲ್ಲಿ ಮಹಿಳೆಯರು ಅಪಾಯಕಾರಿ ರೀತಿಯಲ್ಲಿ ಪ್ರಯಾಣಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು. ಸಾಮಾಜಿಕ ಭದ್ರತಾ ಪಿಂಚಣಿಗೆ ₹32 ಸಾವಿರ ವಾರ್ಷಿಕ ಆದಾಯ ಮಿತಿ ವಿಧಿಸಿರುವುದು ಇಂದಿನ ಜೀವನ ವೆಚ್ಚಕ್ಕೆ ತಕ್ಕುದಲ್ಲ. ವೃದ್ಧರು, ವಿಧವೆಯರು, ಅಂಗವಿಕಲರು ಹಾಗೂ ನಿರ್ಗತಿಕರಿಗೆ ನೆರವಾಗಬೇಕಾದ ಪಿಂಚಣಿ ಯೋಜನೆಗಳಲ್ಲಿ ಇಂತಹ ಮಿತಿಗಳನ್ನು ಮುಂದುವರಿಸುವುದು ಅವೈಜ್ಞಾನಿಕವಾಗಿದೆ ಎಂದರು.

ಎಸ್‌ಡಿಪಿಐ ಪ್ರಮುಖ ಒತ್ತಾಯಗಳು: ಸಾಮಾಜಿಕ ಭದ್ರತಾ ಪಿಂಚಣಿಯ ₹32 ಸಾವಿರ ವಾರ್ಷಿಕ ಆದಾಯ ಮಿತಿ ರದ್ದುಪಡಿಸಬೇಕು. ಅರ್ಹ ಬಿಪಿಎಲ್ ಕುಟುಂಬಗಳಿಂದ ಅನಗತ್ಯ ದಾಖಲೆಗಳನ್ನು ಕೇಳಬಾರದು. ಗೃಹಜ್ಯೋತಿ ಮರುದಾಖಲೆ ಪ್ರಕ್ರಿಯೆ ಕೈಬಿಡಬೇಕು. ಗೃಹಲಕ್ಷ್ಮಿಯ ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಶಕ್ತಿ ಯೋಜನೆಗೆ ಅಗತ್ಯ ಪ್ರಮಾಣದಲ್ಲಿ ಹೆಚ್ಚುವರಿ ಬಸ್‌ಗಳನ್ನು ಒದಗಿಸಬೇಕು.

ಬಡವರ ಪರ ನಿಲ್ಲುವುದಾಗಿ ಹೇಳುವ ಸರ್ಕಾರಗಳು ಕಲ್ಯಾಣ ಯೋಜನೆಗಳನ್ನು ಸರಳ, ಪಾರದರ್ಶಕ ಹಾಗೂ ಜನಸ್ನೇಹಿಯಾಗಿ ಜಾರಿಗೊಳಿಸಬೇಕು. ದಾಖಲೆಗಳ ಹೆಸರಿನಲ್ಲಿ ಅರ್ಹರನ್ನು ಯೋಜನೆಗಳಿಂದ ವಂಚಿಸುವ ಪ್ರಯತ್ನವನ್ನು ಎಸ್‌ಡಿಪಿಐ ವಿರೋಧಿಸಲಿದೆ ಎಂದು ಅಕ್ಬರ್ ಹುಸೇನ್ ನಗುಂಡಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಗೌಸ್ ಮೊಯಿನುದ್ದಿನ್, ನಜೀರ್ ಅಹ್ಮದ್, ಹಪೀಜ್, ಸೈಯದ್ ಇರ್ಫಾನ್, ಸೈಯದ್ ಅಜೀಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜರುಗುತ್ತಿದರೆ ತಿಳಿಸಿ - ಚಂದ್ರಶೇಖರ್ ನಾಯಕ

112 ಉಪಯೋಗ ಪಡೆದುಕೊಳಬೇಕು. ಮಕ್ಕಳ ಬಗ್ಗೆ ಪಾಲಕರು ನಿಗಾವಹಿಸಬೇಕು. ಮನೆಯಿಂದಲೇ ಪಾಲಕರು ಮಕ್ಕಳಿಗೆ ಒಳೇಯ ಸಂಸ್ಕಾರ ನೀಡಬೇಕು. ಹೊರಗಡೆ ಹೊದಂತಹ ಮಕ್ಕಳು ಏನು ಮಾಡುತ್ತಿದ್ದಾರೆ. ಊಟ, ಇನ್ನಿತರ ಚಲನವಲನ ಬಗ್ಗೆ ಗಮನ ವಹಿಸಬೇಕಾಗಿದೆ. ಜಿಲ್ಲೆಯಲ್ಲಿ ದಾಖಲಾದ ಪ್ರಕರಣಗಳ ಫಲಾನುಭವಿಗಳಿಗೆ ಪರಿಹಾರ ಕೂಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಅದಿಕಾರಿಗಳನ್ನು ಸಭೆಯಲ್ಲಿ ಪಾಲ್ಗೊಗುವಂತೆ ಮಾಡಲಾಗುವುದು ಎಂದರು.

ತಹಸೀಲ್ದಾರ ತಾಲೂಕ ದಂಡಾದಿಕಾರಿ ಅಶೋಕ ಪವಾರ ಮಾತನಾಡಿ ಪ.ಜಾ.ಪಂಗಡದವರಿಗೆ ಅವಕಾಶಗಳು ಬಹಳ ಇವೆ ಪಾಲಕರು ಅವುಗಳನ್ನು ಗುರುತಿಸಿ ಮಕ್ಕಳಿಗೆ ಕೊಡಿಸಿ. ನಾನು ಹಾಗೂ ಡಿವೈಎಸ್ ಪಿಯರು ಇದೇ ಸಮಾಜದವರಾಗಿದ್ದೂ ಸರ್ಕಾರದ ಯೋಜನೆಗಳ ಸದುಪಯೋಗ ಪಡೆದುಕೊಂಡು ಈ ಸ್ಥಾನಕ್ಕೆ ಬಂದಿದೆವೆ. ಮುಂದಿನ ಸಭೆಗೆ ಸಮಾಜಕಲ್ಯಾಣ ಇಲಾಖೆ, ಅಬಕಾರಿ ಇಲಾಖೆ ಇನ್ನಿತರ ಆದಿಕಾರಿಗಳು ಭಾಗವಹಿಸುವಂತೆ ತಿಳಿಸಲಾಗುವುದು. ವಯೋವೃದ್ದದರು ಕಛೇರಿಗೆ ಬಂದಾಗ ಕುಳಿತುಕೊಳುವ ಆಸನ ವ್ಯವಸ್ಥೆ ಮಾಡಲಾಗುವುದು. ರಾಜ್ಯದಲ್ಲಿ ಕಳೆದ 3 ತಿಂಗಳಿಂದ ಪಿಂಚಣಿ ಸ್ಥಗಿತವಾಗಿದೆ. ಅರ್ಹಪಲಾನುಭವಿಗಳಿಗೆ ದೊರೆಯುವ ನಿಟ್ಟಿನಲ್ಲಿ ಪತಿಶೀಲನೆ ಮಾಡಲಾಗುತ್ತಿದೆ. ಅದಿಕಾರಿ - ಕಟ್ಟಡ ಕೊರತೆಯಿಂದ ಕಛೇರಿಗಳು ಪ್ರಾರಂಭಕ್ಕೆ ತೊಂದರೆಯಾಗುತ್ತಿದೆ ಎಂದರು. ಮುಖಂಡರಾದ ಬಸವರಾಜ ಭಂಡಾರಿ, ರಾಜಪ್ಪ ಹೊನ್ನಟಗಿ, ಅಮರೇಶ ಗಡ್ಲ, ಅಬ್ರಾಹಂ ಹೊನ್ನಟಗಿ, ಸೂರಿಹುಸೇನಪ್ಪ ನಾಯಕ, ಅಪ್ಪಾಜಿ ನಾಯಕ ಮಾತನಾಡಿ ಈ ಸಭೆಗೆ ಕೇಲವೆ ಕೇಲವು ಅದಿಕಾರಿಗಳು ಭಾಗವಹಿಸಿದ್ದಾರೆ. ಮುಖ್ಯವಾಗಿ ಸಮಾಜ ಕಲ್ಯಾಣ, ಅಸಹಕಾರಿ ಇಲಾಖೆ ಅಧಿಕಾರಿಗಳು, ಬ್ಯಾಂಕಿನ ಮ್ಯಾನೇಜರ್ ಭಾಗವಹಿಸಿಲ, ಪ.ಜಾ.ಪಂಗಡದ ಜನಾಂಗದ ಕಾಲೋನಿಗಳಲ್ಲಿ ಸ್ವಚ್ಛತೆ ಮಾಯವಾಗಿದೆ, ಯುವಕರು ಮದ್ಯಪಾನ ದೂಮಪಾನಕ್ಕೆ ದಾಸರಾಗುತ್ತಿದ್ದಾರೆ. ಪಂಚಾಯತಿಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಸಿಗುತ್ತಿಲ, ಒಬ್ಬರು ಇಬ್ಬರ ಜಗಳ ಜಾತಿ ಜಾತಿಗಳ ನಡುವೆ ಎತ್ತಿ ಕಟದಟುವ ಕೆಲಸ ಮಾಡುತ್ತಿದ್ದಾರೆ. ಪ್ರತಿ ತಿಂಗಳು ಸಭೆ ಕರೆಯಿರಿ, ವಾರ್ಡಗಳಲ್ಲಿ ಸಭೆ ಆಯೋಜನೆ ಮಾಡಿ ಎಂದರು.

ಈ ಸಂದರ್ಭದಲ್ಲಿ ಸಿಪಿಐ ಶಶಿಕಾಂತ ಎಂ, ತಾ.ಪಂ ಇಒ ಮಂಜುನಾಥ, ಪಿಎಸ್ ಐ ಚಂದ್ರಶೇಖರ್ ಹಿರೇಮಠ, ಕವಿತಾಳ ಪಿಎಸ್ ಐ ಅಜ್ಮೀರ್ ಸಮುದಾಯ ಸಂಘಟನೆ ಅದಿಕಾರಿ ಹಂಪಯ್ಯಪಾಟೀಲ್, ಮುಖಂಡರಾದ ಬಸವರಾಜ ಕಲ್ಲೂರು, ಬಸವರಾಜ ದಳಪತಿ ಜಾಲಾಪೂರು, ಪ.ಪಂಚಾಯತಿ ಸದಸ್ಯರಾದ ಸೂರಿ ದುರುಗಣ್ಣನಾಯಕ, ಜಯಪ್ಪ, ಎಂ.ಮನೋಹರ್, ಮಲ್ಲಪ್ಪ ಎನ್, ಸುಭಾಶ ಚಾಗಭಾವಿ, ವೆಂಕಟೇಶ ದೊರೆ, ಅಂಬುನಾಯಕ, ಚನ್ನಪ್ಪ ಬೂದಿನಾಳ,

ಕ.ಕಾ.ಪತ್ರಕರ್ತ ಸಂಘದ ಅದ್ಯಕ್ಷ ಹನುಮೇಶ, ಶಿವರಾಜ, ರಾಜು ಗಿಂಡಿ, ಮೇಶಾಕ್ ಡಿ, ಶಿವರಾಜ ನಾಯಕ ಜಾಲಾಪೂರ, ದುರುಗಪ್ಪ ಭೋವಿ, ಬಸವರಾಜ ಜಂಬಲದಿನ್ನಿ, ಬಸವ ಅಟೋ.ಟಿ ರಮೇಶ ನಾಯಕ, ರಾಮಣ್ಣ ಮೇಸ್ತ್ರಿ, ಮಲ್ಲೀಕ್,ಯಲ್ಲಪ್ಪ ನವಲಕಲ್ ಸೇರಿದಂತೆ ಇನ್ನಿತರರ ಇದ್ದರು.

ಆ. 16ರಂದು ಹಟ್ಟಿ ಗ್ರಾಮದಲ್ಲಿ ರಾಜ್ಯಮಟ್ಟದ ಸಂಯಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮ



ಕೊಪ್ಪಳ .ಆ.14-

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ಕೊಪ್ಪಳದ ಗಾಂಧಿ ಬಳಗವು ಜಂಟಿಯಾಗಿ ಪದವಿ ಓದುತ್ತಿರುವ ಜಿಲ್ಲೆಯ ವಿದ್ಯಾರ್ಥಿಗಳಿಗೆ ಮದ್ಯ ಮತ್ತು ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ಯುವಜನತೆಯ ಪಾತ್ರ ವಿಷಯದ ಕುರಿತು ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಎಚ್. ಈರಮ್ಮ ಪ್ರಥಮ ಸ್ಥಾನ ಪಡೆದಿದ್ದಾರೆ. ಒಟ್ಟು 70 ವಿದ್ಯಾರ್ಥಿಗಳು ಈ ಸ್ಪರ್ಧೆಗೆ ಪ್ರಬಂಧಗಳನ್ನು ಕಳುಹಿಸಿದ್ದರು. ಈರಮ್ಮ ಕೊಪ್ಪಳದ ಗವಿಸಿದ್ದೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಬಿಎಸ್‌ಸಿ ಎರಡನೇ ವರ್ಷದ ವಿದ್ಯಾರ್ಥಿನಿ. ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಬಿಕಾಂ ಪ್ರಥಮ ವರ್ಷ ಓದುತ್ತಿರುವ ಕಾರಟಗಿ ತಾಲ್ಲೂಕಿನ ಮೈಲಾಪುರ ಸಮೀಪದ ಗುಡೂರು ಗ್ರಾಮದ ಚೈತ್ರಾ ಸೋಮಣ್ಣ ದ್ವಿತೀಯ ಮತ್ತು ತಾಲ್ಲೂಕಿನ ಇರಕಲ್ಲಗಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿಎ ವಿದ್ಯಾರ್ಥಿನಿ ಅಂಬಿಕಾ ಶರಣಪ್ಪ ವೀರಾಪುರ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಪ್ರಥಮ ಸ್ಥಾನ ಪಡೆದವರಿಗೆ ರೂ. 3,000, ದ್ವಿತೀಯ ರೂ. 2,000 ಹಾಗೂ ತೃತೀಯ ಸ್ಥಾನ ಪಡೆದವರಿಗೆ ರೂ. 1000 ನಗದು ಬಹುಮಾನ ಸಿಗಲಿದೆ.

ನಿರ್ಣಾಯಕರಾಗಿ ಉಪನ್ಯಾಸಕರಾದ ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್, ಹನುಮಂತಪ್ಪ ಶಲ್ವಡಿ, ಹನುಮೇಶ ಚೌಡಕಿ, ಸಹ ಶಿಕ್ಷಕ ಪ್ರಾಣೇಶ ಪೂಜಾರ, ರಂಗ ಶಿಕ್ಷಕ ಗುರುರಾಜ ಎಲ್. ಕಾರ್ಯನಿರ್ವಹಿಸಿದ್ದರು.

16ರಂದು ಕಾರ್ಯಕ್ರಮ: ಮಂಡಳಿಯು ತಾಲ್ಲೂಕಿನ ಹಟ್ಟಿ ಗ್ರಾಮಕ್ಕೆ ರಾಜ್ಯ ಮಟ್ಟದ ಸಂಯಮ ಪ್ರಶಸ್ತಿ ಘೋಷಣೆ ಮಾಡಿದ್ದು ಆ. 16ರಂದು ಸಂಜೆ 4.30ಕ್ಕೆ ಅದೇ ಗ್ರಾಮದಲ್ಲಿ ನಡೆಯುವ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ನೀಡಲಾಗುತ್ತದೆ.

ಆ.20 ರಂದು ಡಿ. ದೇವರಾಜ ಅರಸು ಜಯಂತಿ ಅರ್ಥಪೂರ್ಣ ಆಚರಣೆಗೆ ಜಿಲ್ಲಾಡಳಿತದಿಂದ ಸಿದ್ಧತೆ: ಅಪರ ಜಿಲ್ಲಾಧಿಕಾರಿ



ವಿಜಯನಗರ,ಆ.14-

ಸಾಮಾಜಿಕ ನ್ಯಾಯದ ಹರಿಕಾರ, ಹಿಂದುಳಿದ ವರ್ಗಗಳ ಹಿತರಕ್ಷಕ ಹಾಗೂ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಜಯಂತಿಯನ್ನು ಜಿಲ್ಲೆಯಲ್ಲಿ ಅತ್ಯಂತ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಡಳಿತ ಅಗತ್ಯ ಸಿದ್ಧತೆ ಮಾಡಿಕೊಂಡಿದೆ ಎಂದು ಅಪರ ಜಿಲ್ಲಾಧಿಕಾರಿ ಇ. ಬಾಲಕೃಷ್ಣ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು (ಆ.13) ಬೆಳಿಗ್ಗೆ ಆಯೋಜಿಸಿದ್ದ ಡಿ. ದೇವರಾಜ ಅರಸು ಜಯಂತಿ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಡಿನ ಅಭಿವೃದ್ಧಿ ಮತ್ತು ಸಾಮಾಜಿಕ ಸುಧಾರಣೆಗೆ ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಅವರ ಕೊಡುಗೆ ಅಪಾರ. 1973ರ ನವೆಂಬರ್ 1 ರಂದು ಅಂದಿನ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಿದ ಹೆಗ್ಗಳಿಕೆ ಡಿ. ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ಕನ್ನಡ ನಾಡಿನ ಏಕೀಕರಣ, ಸಾಮಾಜಿಕ ಕ್ರಾಂತಿ ಮತ್ತು ನಾಡಿನ ಅಸ್ಮಿತೆಗೆ ಅವರು ನೀಡಿದ ಕೊಡುಗೆ ಚಿರಸ್ಮರಣೀಯವಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಸ್ಮರಿಸಿದರು.

ಜಯಂತಿಯ ಅಂಗವಾಗಿ ಜಿಲ್ಲೆಯ ವಿವಿಧ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ, ಪಂಗಡಗಳ ವಿದ್ಯಾರ್ಥಿನಿಲಯಗಳಲ್ಲಿ ಕ್ರೀಡೆ, ಪ್ರಬಂಧ ಹಾಗೂ ರಸಪ್ರಶ್ನೆ ಸ್ಪರ್ಧೆಗಳನ್ನು ಆಯೋಜಿಸಲಾಗುವುದು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮತ್ತು ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ, ಬಹುಮಾನ ವಿತರಿಸಲಾಗುವುದು. ಅರಸು ಅವರ ಜೀವನ ಚರಿತ್ರೆ, ಉಳುವವನೇ ಭೂಮಿಯ ಒಡೆಯ ಕಾಯ್ದೆ ಹಾಗೂ ಅವರ ಸಾಮಾಜಿಕ ಕ್ರಾಂತಿಕಾರಿ ನಿರ್ಧಾರಗಳ ಕುರಿತು ನುರಿತ ಸಂಪನ್ಮೂಲ ವ್ಯಕ್ತಿಗಳು ಮತ್ತು ಉಪನ್ಯಾಸಕರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗುವುದು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು, ಅಧಿಕಾರಿಗಳು, ಗಣ್ಯರು ಹಾಗೂ ಸಾರ್ವಜನಿಕರಿಗೆ ಭಾಗವಹಿಸಲಿದ್ದಾರೆ. ಕಾರ್ಯಕ್ರಮ ನಡೆಯುವ ಸಭಾಂಗಣದ ನೈರ್ಮಲ್ಯ, ಕುಡಿಯುವ ನೀರು, ಆಸನ ವ್ಯವಸ್ಥೆ ಅಚ್ಚುಕಟ್ಟಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶಶಿಕಲಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರವಿಕುಮಾರ್, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ಸಮುದಾಯದ ಮುಖಂಡರು, ಸಾರ್ವಜನಿಕರು ಭಾಗವಹಿಸಿದ್ದರು.

ಕುಟುಂಬದಲ್ಲಿ ಮಹಿಳೆಯರ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಿ: ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಹನುಮಂತಪ್ಪ ಕರೆ

ಬಳ್ಳಾರಿ,ಆ.14-

ಕುಟುಂಬದ ಸಮಗ್ರ ಅಭಿವೃದ್ಧಿ ಹಾಗೂ ನೆಮ್ಮದಿಗೆ ಮಹಿಳೆಯರ ಆರೋಗ್ಯ ಅತ್ಯಂತ ಮುಖ್ಯವಾಗಿದ್ದು, ಪ್ರತಿಯೊಂದು ಕುಟುಂಬದಲ್ಲೂ ಮಹಿಳೆಯರ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ಹನುಮಂತಪ್ಪ ಅವರು ಹೇಳಿದರು.

ನಗರದ 5ನೇ ವಾರ್ಡ್ನ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನಗರ ಆರೋಗ್ಯ ಕೇಂದ್ರ, ಮರಿಸ್ವಾಮಿಮಠ ಹಾಗೂ ನಮ್ಮ ಕ್ಲಿನಿಕ್' ಅಂದ್ರಾಳ್ ಇವರ ಸಹಯೋಗದೊಂದಿಗೆ ಮಹಿಳಾ ಆರೋಗ್ಯ ಸಮಿತಿ ಸದಸ್ಯರಿಗೆ ಆಯೋಜಿಸಲಾಗಿದ್ದ ರಾಷ್ಟ್ರಿಯ ಆರೋಗ್ಯ ಕಾರ್ಯಕ್ರಮಗಳ ಜಾಗೃತಿ ಕಾರ್ಯಕ್ರಮ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

★ಮಹಿಳಾ ಆರೋಗ್ಯ ಸಮಿತಿ ರಚನೆ:★

ವಗರದ ವಿವಿಧ ವಾರ್ಡ್ಗಳಲ್ಲಿ 15 ರಿಂದ 20 ಮಹಿಳೆಯರನ್ನು ಆಯ್ಕೆ ಮಾಡಿ ಸಮಿತಿ ರಚಿಸಲಾಗುತ್ತಿದ್ದು, ಇವರ ಮೂಲಕ ಸಾರ್ವಜನಿಕರಿಗೆ ಸಿಗುವ ಆರೋಗ್ಯ ಸೇವೆಗಳ ಕುರಿತು ಚರ್ಚಿಸಿ ಸೂಕ್ತ ಸಲಹೆ ಪಡೆಯಲಾಗುತ್ತದೆ ಎಂದು ತಿಳಿಸಿದರು. ಗರ್ಭಿಣಿಯರ ನೋಂದಣಿ, ನಿಯಮಿತ ತಪಾಸಣೆ, ಆಸ್ಪತ್ರೆಗಳಲ್ಲೇ ಸುರಕ್ಷಿತ ಹೆರಿಗೆ ಮತ್ತು ಪ್ರಸವೋತ್ತರ ಆರೈಕೆಗೆ ಆದ್ಯತೆ ನೀಡಲಾಗುವುದು. ವೈಯಕ್ತಿಕ ಸ್ವಚ್ಛತೆ, ಪೌಷ್ಟಿಕ ಆಹಾರ ಮತ್ತು ಆರೋಗ್ಯಕರ ಜೀವನಶೈಲಿ ಕುರಿತು ಅರಿವು ಮೂಡಿಸಲಾಗುತ್ತಿದೆ ಎಂದರು.

ಮುಟ್ಟಿನ ಸ್ವಚ್ಛತೆ, ರಕ್ತಹೀನತೆ ತಡೆಗಟ್ಟುವಿಕೆ ಮತ್ತು ಗರ್ಭಕಂಠದ ಕ್ಯಾನ್ಸರ್ ತಡೆಗೆ ನೀಡಲಾಗುವ ಹೆಚ್‌ಪಿವಿ ಲಸಿಕೆ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕು. ಡೆಂಗ್ಯೂ, ಕ್ಷಯ, ಮಧುಮೇಹ ಹಾಗೂ ರಕ್ತದೊತ್ತಡದಂತಹ ಕಾಯಿಲೆಗಳ ಉಚಿತ ತಪಾಸಣೆಗೆ ಪ್ರೇರಣೆ ನೀಡಲಾಗುತ್ತಿದ್ದು, ಮಾನಸಿಕ ಒತ್ತಡ ನಿವಾರಣೆಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗಳನ್ನು ಸಂಪರ್ಕಿಸಬೇಕು ಎಂದು ಕೋರಿದರು.

ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿದೆ. ಮಹಿಳೆಯರು ತಮ್ಮ ಆರೋಗ್ಯ ಸಮಸ್ಯೆಗಳನ್ನು ಮುಚ್ಚಿಡದೆ ಕ್ಷೇತ್ರ ಮಟ್ಟದ ಸಿಬ್ಬಂದಿಗಳ ಗಮನಕ್ಕೆ ತರಬೇಕು ಮತ್ತು ನಿರಂತರ ತಪಾಸಣೆ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

★ವಿಶ್ವ ಅಂಗಾಗ ದಾನ ದಿನದ ಜಾಗೃತಿ:★

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ.ಪಿ ಅವರು ವಿಶ್ವ ಅಂಗಾಗ ದಾನ ದಿನದ ಮಹತ್ವ ಹಾಗೂ ಅಂಗಾಗ ದಾನದ ಅಗತ್ಯತೆಯ ಬಗ್ಗೆ ಸುದೀರ್ಘವಾಗಿ ಮಾಹಿತಿ ನೀಡಿದರು.

ಬಾಕಿ ವೇತನ ಪಾವತಿಗೆ ಆಗ್ರಹಿಸಿ ಆರೋಗ್ಯ ಇಲಾಖೆ ಹೊರಗುತ್ತಿಗೆ ನೌಕರರ ಪ್ರತಿಭಟನೆ

ನಡೆಸುವುದಾಗಿ ಈ ಹಿಂದೆಯೇ ಎಚ್ಚರಿಕೆ ನೀಡಲಾಗಿತ್ತು. ಆದರೂ ಸಮಸ್ಯೆ ಬಗೆಹರಿಯದ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಬೇಕಾಯಿತು ಎಂದು ಅವರು ಹೇಳಿದರು.

ಪ್ರತಿಭಟನೆಯನ್ನುದ್ದೇಶಿಸಿ ಟಿಯುಸಿಐ ಪ್ರಧಾನ ಕಾರ್ಯದರ್ಶಿ ಆರ್. ಮಾನಸಯ್ಯ ಮಾತನಾಡಿ, ''ಆರೋಗ್ಯ ಇಲಾಖೆಯ ವಿವಿಧ ಸಂಸ್ಥೆಗಳಲ್ಲಿ ಹಗಲಿರುಳು ದುಡಿಯುತ್ತಿರುವ ಹೊರಗುತ್ತಿಗೆ ನೌಕರರಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡದಿರುವುದು ಅನ್ಯಾಯ. ಬಾಕಿ ವೇತನವನ್ನು ಕೂಡಲೇ ಪಾವತಿಸಿ, ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಬೇಕು'' ಎಂದು ಆಗ್ರಹಿಸಿದರು. ನಂತರ ಟಿಯುಸಿಐ ರಾಜ್ಯ ಕಾರ್ಯದರ್ಶಿ ಎಂ. ಗಂಗಾಧರ್ ಮಾತನಾಡಿದರು. ಟಿಯುಸಿಐ ಜಿಲ್ಲಾಧ್ಯಕ್ಷ ಜಿ. ಅಡವಿರಾವ್, ಎಂ. ನಿರಂಜನ್ ಕುಮಾರ್ ಮಣಿ, ನಿಸರ್ಗ, ನರಸಪ್ಪ ರಾಯಚೂರು, ಶಂಕ್ರಪ್ಪ ಗುಂಡಸಾಗರ, ಉಪಾಧ್ಯಕ್ಷರಾದ ಆಂಜನೇಯ ಅರಕೇರಿ, ದ್ಯಾಮಣ್ಣ ನಾಗರಾಳ, ಮಲ್ಲಿಕಾರ್ಜುನ, ಜಗದೀಶ, ಶರಣಬಸವ, ದೇವರಾಜ, ನಾಗಯ್ಯ ಚಿಕ್ಕಮಠ, ಫರಿಜನಾ ಬೇಗಂ, ಚೈತ್ರ, ಗೌರಮ್ಮ, ಎಂ. ಗುಂಡಮ್ಮ, ಯಲ್ಲಪ್ಪ ಆನ್ವರಿ, ವೆಂಕಟೇಶ ಸೇರಿದಂತೆ ನೌಕರರು ಹಾಗೂ ಸಂಘದ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನೌಕರರ ಪ್ರಮುಖ ಬೇಡಿಕೆಗಳು ಬಾಕಿ ಇರುವ ಸಂಪೂರ್ಣ ವೇತನವನ್ನು ಕೂಡಲೇ ಪಾವತಿಸಬೇಕು. ತಡೆಹಿಡಿದಿರುವ ಪರಿಷ್ಕೃತ ವೇತನವನ್ನು ತಕ್ಷಣ ಜಾರಿಗೊಳಿಸಬೇಕು. ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಉದ್ಯೋಗ ಭದ್ರತೆ ಒದಗಿಸಬೇಕು. ಖಾಯಂ ನೇಮಕಾತಿಯ ನೆಪದಲ್ಲಿ ಹೊರಗುತ್ತಿಗೆ ನೌಕರರನ್ನು ವಜಾಗೊಳಿಸುವುದನ್ನು ನಿಲ್ಲಿಸಬೇಕು. ಎಲ್ಲ ನೌಕರರಿಗೆ ಪಿಎಫ್ ಮತ್ತು ಇಎಸ್‌ಐ ಸೌಲಭ್ಯಗಳನ್ನು ಜಾರಿಗೊಳಿಸಬೇಕು. ಬಾಕಿ ವೇತನ ಪಾವತಿಸಿ, ಹೊರಗುತ್ತಿಗೆ ನೌಕರರ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಸಂಘದ ಮುಖಂಡರು ಎಚ್ಚರಿಸಿದರು.

ವರ್ಷಕ್ಕೆ ಸೀಮಿತಗೊಳಿಸಿ: ಅಣ್ಣಪ್ಪ ಮೇಟಿಗೌಡ

ಬದಲಾವಣೆಯನ್ನು ಮರುಪರಿಶೀಲಿಸಿ, ಹಿಂದಿನ ಮೂರು ವರ್ಷದ ವ್ಯವಸ್ಥೆಯನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಯಾವುದೇ ವ್ಯಕ್ತಿಯ ವೈಯಕ್ತಿಕ ಸಂಸ್ಥೆಯಲ್ಲ. ಅದು ಪ್ರತಿಯೊಬ್ಬ ಕನ್ನಡಿಗನ, ಸಾಹಿತಿಗಳ ಹಾಗೂ ಕನ್ನಡ ನಾಡು-ನುಡಿಯ ಸೇವೆಗಾಗಿ ಇರುವ ಸಾರ್ವಜನಿಕ ಸಂಸ್ಥೆಯಾಗಿದೆ. ಹೀಗಾಗಿ ದೀರ್ಘಾವಧಿಯ ಅಧಿಕಾರಕ್ಕಿಂತ ನಿಗದಿತ ಮೂರು ವರ್ಷದ ಅವಧಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ, ನಂತರ ಹೊಸಬರಿಗೆ ಅವಕಾಶ ನೀಡುವ ಪ್ರಜಾಸತ್ತಾತ್ಮಕ ಹಾಗೂ ಆರೋಗ್ಯಕರ ಸಂಪ್ರದಾಯ ಮುಂದುವರಿಯಬೇಕು ಎಂದು ಹೇಳಿದರು.

ನಂತರ ಮಾತನಾಡಿದ ಕಲಾ ಸಂಕುಲ ಸಂಸ್ಥೆಯ ಕಾರ್ಯದರ್ಶಿ ಮಾರುತಿ ಬಡಿಗೇರ್, ಕನ್ನಡ ಸಾಹಿತ್ಯ ಪರಿಷತ್ತಿನ ಬೈಲಾ ತಿದ್ದುಪಡಿ ಮೂಲಕ ಪ್ರಸ್ತುತ ಐದು ವರ್ಷಗಳಾಗಿರುವ ಅಧ್ಯಕ್ಷರ ಅಧಿಕಾರಾವಧಿಯನ್ನು ಮತ್ತೆ ಮೂರು ವರ್ಷಕ್ಕೆ ಇಳಿಸುವ ಕುರಿತು ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿ ಕೆ.ಎ. ದಯಾನಂದ್ ಅವರು ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಕುರಿತು ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ನಾಡು, ನುಡಿ ಹಾಗೂ ಸಾಹಿತ್ಯ ಸೇವೆಗಾಗಿ ಆಯ್ಕೆಯಾಗುವ ಆಡಳಿತ ಮಂಡಳಿಯು ನಿಗದಿತ ಮೂರು ವರ್ಷಗಳ ಅವಧಿಯಲ್ಲಿ ಕಾರ್ಯನಿರ್ವಹಿಸಿ, ನಂತರ ಮತ್ತೊಬ್ಬರಿಗೆ ಅವಕಾಶ ನೀಡುವ ವ್ಯವಸ್ಥೆ ಜಾರಿಗೆ ಬರಬೇಕು. ಇದರಿಂದ ಕಸಾಪದಲ್ಲಿ ಹೊಸ ಚಿಂತನೆ, ಹೊಸ ನಾಯಕತ್ವ ಹಾಗೂ ಮತ್ತಷ್ಟು ಪರಿಣಾಮಕಾರಿ ಕನ್ನಡ ಸೇವೆಗೆ ಅವಕಾಶ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿದರು. ''ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರ ಪ್ರಸ್ತುತ ಐದು ವರ್ಷಗಳ ಅಧಿಕಾರಾವಧಿಯನ್ನು ಮತ್ತೆ ಮೂರು ವರ್ಷಕ್ಕೆ ಸೀಮಿತಗೊಳಿಸಿ ಬೈಲಾ ತಿದ್ದುಪಡಿ ಮಾಡಬೇಕು. ಹೊಸ ನಾಯಕತ್ವ ಹಾಗೂ ಹೊಸ ಚಿಂತನೆಗಳಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈ ಕ್ರಮ ಅಗತ್ಯವಾಗಿದೆ.''

ಆರ್. ನಾಗರಾಜ್ ಮುಂದುವರಿಕೆಗೆ ಆರ್. ನಾಗರಾಜ್ ಮುಂದುವರಿಕೆಗೆ ಜಯ ಕರ್ನಾಟಕ ಆಕ್ರೋಶ

ಇಲಾಖೆ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರನ್ನು

ಬಿಡುಗಡೆಗೊಳಿಸಿ, ಹಾಲಿ ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳನ್ನು ನಿಯೋಜಿಸುವಂತೆ ಸೂಚಿಸಿದ್ದರು. ಮುಖ್ಯ ಕಾರ್ಯದರ್ಶಿಗಳೂ ಇದೇ ಸೂಚನೆಯನ್ನು ಎಲ್ಲಾ ಇಲಾಖೆಗಳಿಗೂ ರವಾನಿಸಿದ್ದರು ಎಂದು ಶಿವಕುಮಾರ್ ಯಾದವ್ ತಿಳಿಸಿದರು.

ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿಗಳ ಆದೇಶದಂತೆ ಇಂಧನ ಇಲಾಖೆ ವ್ಯಾಪ್ತಿಯಲ್ಲಿದ್ದ ಮತ್ತೊಬ್ಬ ನಿವೃತ್ತ ಅಧಿಕಾರಿಯನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಆದರೆ ಕರ್ನಾಟಕ ವಿದ್ಯುತ್ ನಿಗಮದ ಆರ್ಥಿಕ ನಿರ್ದೇಶಕರ ಹುದ್ದೆಯಲ್ಲಿರುವ ಆರ್. ನಾಗರಾಜ್ ಅವರನ್ನು ಮಾತ್ರ ಮುಂದುವರಿಸಿರುವುದು ಏಕೆ? ಅವರಿಗೆ ಯಾವ ವಿಶೇಷ ಅರ್ಹತೆ ಅಥವಾ ಪ್ರಭಾವವಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

ನಿಯಮ ಎಲ್ಲರಿಗೂ ಒಂದೇ ಆಗಿರಲಿ

ಸರ್ಕಾರವೇ ಹೊರಡಿಸಿದ ಆದೇಶಗಳನ್ನು ಸರ್ಕಾರದ ಅಧೀನದಲ್ಲಿರುವ ಸಂಸ್ಥೆಗಳು ಪಾಲಿಸದಿರುವುದು ಆಡಳಿತ ವ್ಯವಸ್ಥೆಯ ಬಗ್ಗೆ ಪ್ರಶ್ನೆ ಮೂಡಿಸುತ್ತದೆ. ನಿವೃತ್ತ ಅಧಿಕಾರಿಗಳ

ಮುಂದುವರಿಕೆಗೆ ಬದಲಾಗಿ ಅರ್ಹ ಹಾಲಿ ಅಧಿಕಾರಿಗಳನ್ನು ನೇಮಕ ಮಾಡಬೇಕು. ಆರ್. ನಾಗರಾಜ್ ಅವರನ್ನು ಕೂಡಲೇ ಹುದ್ದೆಯಿಂದ ಬಿಡುಗಡೆಗೊಳಿಸಿ, ಸರ್ಕಾರದ ಆದೇಶವನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ನಡೆಸಲಾಗುವುದು. ಅಗತ್ಯವಿದ್ದರೆ ಲೋಕಾಯುಕ್ತ ಸಂಸ್ಥೆಗೂ ದೂರು ಸಲ್ಲಿಸಲಾಗುವುದು ಎಂದು ಎಸ್. ಶಿವಕುಮಾರ್ ಯಾದವ್ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಜಯ ಕರ್ನಾಟಕ ತಾಲೂಕು ಅಧ್ಯಕ್ಷ ಸುರೇಶ ಮಡಿವಾಳ, ಪ್ರಧಾನ ಕಾರ್ಯದರ್ಶಿ ರಾಜಾಸಾಬ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರುಣಾಕರ ರೆಡ್ಡಿ, ಉಪಾಧ್ಯಕ್ಷ ಜೆ. ಪ್ರಕಾಶ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು

ನಿಮ್ಮೂರು ಸುದ್ದಿ

ಸಂಪಾದಕೀಯ

ಸುಟ್ಟ ಬೂದಿಯಿಂದ ತಲೆಯೆತ್ತಿದ ನ್ಯಾಯ

ದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ನ್ಯಾ.ಯಶವಂತ್ ವರ್ಮಾ ಅವರ ಗೋದಾಮಿನಲ್ಲಿ ಸುಟ್ಟದ್ದು ಬರೇ ನೋಟುಗಳಷ್ಟೇ ಆಗಿರಲಿಲ್ಲ. ಈ ದೇಶದ ನ್ಯಾಯ ವ್ಯವಸ್ಥೆಯೇ ಬೆಂಕಿಗೆ ಸಿಲುಕಿ ಬೂದಿಯಾಗಿತ್ತು. ಆ ಬೂದಿಯಿಂದ ನ್ಯಾಯ ವ್ಯವಸ್ಥೆಯ ಅವಶೇಷಗಳನ್ನು ಹುಡುಕಿ ತೆಗೆದು ಅದರ ಪೋಸ್ಟ್ ಮಾರ್ಟಂ ನಡೆಸುವುದು ಅತ್ಯಗತ್ಯವಾಗಿತ್ತು. ಇದೀಗ ಆ ಸುಟ್ಟ ಬೂದಿಯಿಂದ ಆಯ್ದ ಅವಶೇಷಗಳ ಮರಣೋತ್ತರ ವರದಿ ಹೊರ ಬಿದ್ದಿದೆ. ದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಮನೆಯಲ್ಲಿ ನಗದು ಪತ್ತೆ ಪ್ರಕರಣಕ್ಕೆ ಸಂಬಂಧಿಸಿ ಲೋಕಸಭೆಯ ಸ್ಪೀಕರ್ ನೇಮಿಸಿದ್ದ ತನಿಖಾ ಸಮಿತಿಯ ವರದಿ ಬುಧವಾರ ಸಂಸತ್ತಿನ ಎರಡೂ ಸದನಗಳಲ್ಲಿ ಮಂಡನೆಯಾಗಿದೆ. ವರದಿಯ ಪ್ರಕಾರ, ಅವರ ವಿರುದ್ಧದ ಮೂರೂ ಆರೋಪಗಳು ಸಾಬೀತಾಗಿವೆ. ಮುಖ್ಯವಾಗಿ ಅವರ ನಿವಾಸದ ಗೋದಾಮಿನಲ್ಲಿ ಹಣ ಸಿಕ್ಕಿರುವುದು ಹೌದು ಎಂದು ವರದಿ ಹೇಳುತ್ತಿದೆ. ಆ ಹಣದ ಮೂಲವನ್ನು ವಿವರಿಸುವಲ್ಲಿ ವರ್ಮಾ ಅವರು ಸಂಪೂರ್ಣ ವಿಫಲರಾಗಿದ್ದಾರೆ.

2025ರ ಮಾರ್ಚ್‌ನಲ್ಲಿ ನಾಟಕೀಯ ಸನ್ನಿವೇಶವೊಂದರಲ್ಲಿ ನ್ಯಾ. ಯಶವಂತ್ ವರ್ಮಾ ಅವರ ಭ್ರಷ್ಟ ವ್ಯವಹಾರ ಬೆಳಕಿಗೆ ಬಂತು. ಹೊಸದಿಲ್ಲಿಯ ತುಘಲಕ್ ಕ್ರೆಸೆಂಟ್‌ನಲ್ಲಿರುವ ಅವರ ಅಧಿಕೃತ ನಿವಾಸದಲ್ಲಿ ಬೆಂಕಿ ಆಕಸ್ಮಿಕವೊಂದು ಸಂಭವಿಸಿತು. ಅಗ್ನಿಶಾಮಕ ದಳ ಅವರ ನಿವಾಸಕ್ಕೆ ಬೆಂಕಿ ನಂದಿಸುವುದಕ್ಕೆಂದು ಧಾವಿಸಿತು. ನಂದಿಸುವ ಕಾರ್ಯಾಚರಣೆ ಜಾರಿಯಲ್ಲಿರುವಾಗಲೇ ಕೊಠಡಿಯೊಂದರಲ್ಲಿ ಅರೆಸುಟ್ಟ, ಒದ್ದೆಯಾದ ಸ್ಥಿತಿಯಲ್ಲಿದ್ದ 500 ರೂ. ಮುಖಬೆಲೆಯ ನೋಟಿನ ಕಂತೆಗಳನ್ನು ಸಿಬ್ಬಂದಿ ಗಮನಿಸಿದರು. ಆ ಸಿಬ್ಬಂದಿಯ ಮೂಲಕವೇ ಇದು ಹೊರಜಗತ್ತಿಗೂ ತಿಳಿಯಿತು. ಮಾಧ್ಯಮಗಳ ಮೂಲಕ ಅದು ಭಾರೀ ವಿವಾದವನ್ನು ಎಬ್ಬಿಸಿತು. ಚರ್ಚೆ ತೀವ್ರವಾದಾಗ, 2025ರ ಮಾರ್ಚ್ 22ರಂದು ಸುಪ್ರೀಂಕೋರ್ಟ್ ತನಿಖೆಗಾಗಿ ಮೂವರು ಸದಸ್ಯರ ಆಂತರಿಕ ಸಮಿತಿಯನ್ನು ನೇಮಕ ಮಾಡುವುದು ಅನಿವಾರ್ಯವಾಯಿತು. ಅಷ್ಟೇ ಅಲ್ಲ, ನ್ಯಾ. ವರ್ಮಾ ಅವರಿಗೆ ಯಾವುದೇ ರೀತಿಯ ನ್ಯಾಯಾಂಗದ ಕೆಲಸವನ್ನು ಒಪ್ಪಿಸದಂತೆ ಸುಪ್ರೀಂಕೋರ್ಟ್ ಸೂಚನೆ ನೀಡಿತು. ಅದೇ ವರ್ಷ ಅವರು ಅಲಹಾಬಾದ್ ಹೈಕೋರ್ಟ್‌ಗೆ ವರ್ಗವಾದರು. ವರದಿಯಲ್ಲಿ ವರ್ಮಾ ಅವರ ಆರೋಪ ಮೇಲ್ನೋಟಕ್ಕೆ ಸಾಬೀತಾಗಿತ್ತು. ಈ ಹಿನ್ನೆಲೆಯಲ್ಲೇ ಅವರ ರಾಜೀನಾಮೆಗೆ ಸುಪ್ರೀಂಕೋರ್ಟ್ ಸೂಚನೆ ನೀಡಿತು. ಆದರೆ ಸುಪ್ರೀಂಕೋರ್ಟ್‌ನ ಕ್ರಮವನ್ನೇ ವರ್ಮಾ ಅವರು ಪ್ರಶ್ನಿಸಿದರು. ಕಳೆದ ವರ್ಷ ಆಗಸ್ಟ್‌ನಲ್ಲಿ ಈ ಬಗ್ಗೆ ತನಿಖೆ ನಡೆಸುವುದಕ್ಕೆ ಲೋಕಸಭೆಯ ಸಭಾಧ್ಯಕ್ಷರು ಮೂವರು ಸದಸ್ಯರ ಸಮಿತಿಯನ್ನು ರಚಿಸಿದರು. ತನ್ನ ವಾಗ್ದಂಡನೆಗಾಗಿ ಸಮಿತಿಯನ್ನು ರಚಿಸುವ ಲೋಕಸಭಾ ಸ್ಪೀಕರ್ ನಿರ್ಧಾರವನ್ನು ಪ್ರಶ್ನಿಸಿ ವರ್ಮಾ ಅವರು ಸಲ್ಲಿಸಿದ ಅರ್ಜಿಯನ್ನೂ ಕಳೆದ ಜನವರಿಯಲ್ಲಿ ಸುಪ್ರೀಂಕೋರ್ಟ್ ವಜಾಗೊಳಿಸಿತ್ತು.

ಸದ್ಯ ಸ್ಪೀಕರ್ ನೇಮಿಸಿದ್ದ ತನಿಖಾ ಸಮಿತಿಯ ವರದಿಯು ನ್ಯಾ. ವರ್ಮಾ ಅವರು ದೋಷಿ ಎನ್ನುವುದನ್ನು ಸ್ಪಷ್ಟವಾಗಿ ಘೋಷಿಸಿದೆಯಾದರೂ, ಈ ಸಂದರ್ಭದಲ್ಲಿ ಸಂಭವಿಸಿದ ಲೋಪಗಳನ್ನೂ ಅದು ಎತ್ತಿ ತೋರಿಸಿದೆ. 2025ರ ಮಾರ್ಚ್ 14ರಂದು ಬೆಂಕಿ ಅವಘಡ ಸಂಭವಿಸಿದ್ದು, ಕೊಠಡಿಯಲ್ಲಿ ಬೂದಿಯಾಗಿದ್ದ, ಅರೆಸುಟ್ಟ ನೋಟಿನ ಕಂತೆಗಳನ್ನು ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರು ಕಣ್ಣಾರೆ ಕಂಡಿದ್ದಾರೆ. ಹಾಗೆಂದು ಅವರು ಸಮಿತಿಯ ಮುಂದೆ ಹೇಳಿಕೆಯನ್ನೂ ನೀಡಿದ್ದಾರೆ. ಇಷ್ಟು ಪ್ರಮಾಣದ ಅನುಮಾನಾಸ್ಪದ ಹಣದ ಬಗ್ಗೆ ಸಿಬ್ಬಂದಿ ಹೇಳಿಕೆ ನೀಡಿದ ಬಳಿಕವೂ ಇದರ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳು ಯಾಕೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎನ್ನುವ ಪ್ರಶ್ನೆ ಉತ್ತರವಿಲ್ಲದೆ ಬಿದ್ದುಕೊಂಡಿದೆ. ಇಂದು ಸುಟ್ಟ ನೋಟುಗಳ ಯಾವುದೇ ಅವಶೇಷಗಳು ಸಾಕ್ಷ್ಯಗಳಾಗಿ ಸಮಿತಿಯ ಮುಂದಿಲ್ಲ. ಫೋಟೋಗಳು ಮತ್ತು ಇಲೆಕ್ಟ್ರಾನಿಕ್ಸ್ ಸಾಕ್ಷ್ಯಗಳಷ್ಟೇ ಅದರ ಮುಂದಿವೆ. ನೋಟುಗಳ ಒಟ್ಟು ಮೌಲ್ಯದ ಬಗ್ಗೆಯೂ ಮಾಹಿತಿಯಿಲ್ಲ. ನೋಟುಗಳ ಜಪ್ತಿ ಮಾಡಲಾಗಿಲ್ಲ. ಪಂಚನಾಮೆಯೂ ನಡೆದಿಲ್ಲ. ನೋಟುಗಳ ಅವಶೇಷಗಳ ಯಾವುದೇ ಭೌತಿಕ ಪರಿಶೀಲನೆ ನಡೆದಿಲ್ಲ. ಇಷ್ಟೊಂದು ದೊಡ್ಡ ಲೋಪ ಸಂಭವಿಸಲು ಹೇಗೆ ಸಾಧ್ಯ? ಅಗ್ನಿಶಾಮಕ ಸಿಬ್ಬಂದಿ ನೀಡಿದ ಹೇಳಿಕೆಯನ್ನು ಸಂಬಂಧ ಪಟ್ಟ ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಂಡು ತಕ್ಷಣ ಸಾಕ್ಷ್ಯವನ್ನು ಉಳಿಸಿ ಅವುಗಳ ಪಂಚನಾಮೆ ನಡೆಸಿದ್ದರೆ, ವರ್ಮಾ ಅವರು ನುಣುಚಿಕೊಳ್ಳುವುದು ಸುಲಭವಿರಲಿಲ್ಲ.

ಇದೇ ಸಂದರ್ಭದಲ್ಲಿ, ವರ್ಮಾ ಅವರು ಆರಂಭದಲ್ಲಿ ಹಣ ಅಲ್ಲಿ ಹೇಗೆ ಬಂತು ಎನ್ನುವ ಬಗ್ಗೆ ತಮಗಾಗಲಿ, ತಮ್ಮ ಕುಟುಂಬಕ್ಕಾಗಲಿ ಮಾಹಿತಿಯಿಲ್ಲ ಎಂದಿದ್ದರು. ಬಳಿಕ ತಮ್ಮ ಹೇಳಿಕೆಯನ್ನು ಬದಲಿಸಿದ್ದರು. ನೋಟುಗಳನ್ನು ಜಪ್ತಿ ಮಾಡಿಲ್ಲ ಎನ್ನುವುದನ್ನೇ ತಮಗೆ ಪೂರಕವಾಗಿ ಬಳಸಿಕೊಳ್ಳಲು ಯತ್ನಿಸಿದ್ದರು. ನಗದನ್ನು ಅಲ್ಲಿ ಇಡುವ ಮೂಲಕ ತನ್ನ ವಿರುದ್ಧ ಪಿತೂರಿ ಮಾಡಲಾಗಿದೆ ಎಂದೂ ಅವರು ಆರೋಪಿಸಿದ್ದರು. ಅಕ್ರಮ ನಡೆಸಿರುವ ಆರೋಪ ಮಾತ್ರವಲ್ಲ, ಸಾಕ್ಷ್ಯವನ್ನು ನಾಶ ಮಾಡಿದ ಆರೋಪವೂ ವರ್ಮಾ ಮೇಲಿದೆ. ಇದನ್ನು ಯಾವುದೇ ಸಾಮಾನ್ಯ ವ್ಯಕ್ತಿಯೊಬ್ಬ ಮಾಡಿದ್ದರೆ ಅದು ಮಹದಪರಾಧವಾಗಿ ಬಿಡುತ್ತಿತ್ತು. ಹೈಕೋರ್ಟ್‌ನ ನ್ಯಾಯಾಧೀಶರೊಬ್ಬರು ನಡೆಸಿದ ಅಕ್ರಮ ಇದಾಗಿರುವುದರಿಂದಲೇ ಅವರು ಇನ್ನೂ ಕಾನೂನಿನ ಉರುಳಿಗೆ ಬೀಳದೆ ಸ್ವತಂತ್ರವಾಗಿದ್ದಾರೆ. ಇದೀಗ ತನಿಖಾ ವರದಿ ನ್ಯಾ. ವರ್ಮಾ ಅವರನ್ನು ದೋಷಿ ಎಂದು ಘೋಷಿಸಿದೆಯಾದರೂ, ಅವರ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಕುರಿತಂತೆ ಸರಕಾರ ಗೊಂದಲದಲ್ಲಿದೆ. ಯಾಕೆಂದರೆ, ವರ್ಮಾ ಅವರು ಈಗಾಗಲೇ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ದೋಷಿ ಎಂದು ಕಂಡು ಬಂದರೂ ಅವರನ್ನು ಹುದ್ದೆಯಿಂದ ವಜಾಗೊಳಿಸುವ ಪ್ರಸ್ತಾವವನ್ನು ಇನ್ನು ಮುಂದೆ ಮಂಡಿಸಲು ಸಾಧ್ಯವಿಲ್ಲ.

ವರ್ಮಾ ಪ್ರಕರಣವನ್ನು ಮುಂದಿಟ್ಟುಕೊಂಡು, ವಜಾಗೊಳಿಸುವ ಪ್ರಕ್ರಿಯೆಯನ್ನು ಎದುರಿಸುತ್ತಿರುವ ನ್ಯಾಯಾಧೀಶರ ರಾಜೀನಾಮೆ ಸ್ವೀಕರಿಸುವ ಅಧಿಕಾರವನ್ನು ರಾಷ್ಟ್ರಪತಿಗಿಂತ ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ ನೀಡುವುದು ಒಳಿತು ಎಂದು ಹಲವು ಸಂವಿಧಾನ ತಜ್ಞರು ಅಭಿಪ್ರಾಯ ಪಡುತ್ತಾರೆ. ಈ ನಿಟ್ಟಿನಲ್ಲಿ ಸಂವಿಧಾನ ತಿದ್ದುಪಡಿಯ ಅಗತ್ಯವಿದೆ ಎಂದು ಅವರು ಭಾವಿಸುತ್ತಾರೆ. ನ್ಯಾಯಾಧೀಶರು ರಾಜೀನಾಮೆ ನೀಡಿದ್ದರೂ ಕಾಯ್ದೆಯಡಿಯಲ್ಲಿ ರಚಿಸಲಾದ ತನಿಖಾ ಸಮಿತಿಯು ಸಲ್ಲಿಸಿದ ವರದಿಯನ್ನು ಸಂಸತ್ತು ಚರ್ಚಿಸಲು ಬಯಸಿದರೆ ಅದಕ್ಕೆ ಅವಕಾಶ ನೀಡುವಂತೆ ನ್ಯಾಯಾಧೀಶರ ವಿಚಾರಣಾ ಕಾಯ್ದೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕಾಗಿದೆ. ಹಾಗೆಯೇ ನ್ಯಾ. ವರ್ಮಾ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಅವರ ವಿರುದ್ಧ ಕ್ರಿಮಿನಲ್ ಪ್ರಕ್ರಿಯೆ ಆರಂಭಿಸುವುದಕ್ಕೆ ಅವಕಾಶವಿದೆಯೇ ಎನ್ನುವುದರ ಬಗ್ಗೆಯೂ ಸರಕಾರ ಗಂಭೀರವಾಗಿ ಯೋಚಿಸಬೇಕು.

ನ್ಯಾ. ವರ್ಮಾ ಅವರ ನಿವಾಸದಲ್ಲಿ ಪತ್ತೆಯಾದ ಹಣ ಭ್ರಷ್ಟ ಮೂಲದಿಂದ ಬಂದಿರುವುದು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಹೀಗಿರುವಾಗ, ಅವರು ತಮ್ಮ ಅಧಿಕಾರಾವಧಿಯಲ್ಲಿ ನೀಡಿದ ತೀರ್ಪುಗಳ ವಿಶ್ವಾಸಾರ್ಹತೆಯ ಗತಿಯೇನು? ಅವರ ತೀರ್ಪುಗಳಿಂದ ನ್ಯಾಯ ವ್ಯವಸ್ಥೆಗೆ ಆಗಿರುವ ಹಾನಿಗೆ ಪರಿಹಾರವೇನು? ಎನ್ನುವುದರ ಬಗ್ಗೆಯೂ ಚರ್ಚೆ ನಡೆಯಬೇಕಾಗಿದೆ.

ಮತದಾನದ ಹಕ್ಕಿಗಾಗಿ ಭಿಕ್ಷೆ ಬೇಡುವಂತೆ ಮಾಡಬೇಡಿ: ನಟ ಪ್ರಕಾಶ್ ರಾಜ್

''ನಮ್ಮ ಮತದಾನದ ಹಕ್ಕನ್ನು ಖಚಿತಪಡಿಸಿಕೊಳ್ಳಲು ನಮ್ಮನ್ನೇಕೆ ಅಧಿಕಾರಿಗಳ ಹಿಂದೆ ಅಲೆಯುವಂತೆ ಮಾಡುತ್ತಿದ್ದೀರಿ? ನಮ್ಮ ಮೂಲಭೂತ ಹಕ್ಕಿಗಾಗಿ ನಮ್ಮನ್ನು ಭಿಕ್ಷೆ ಬೇಡುವ ಸ್ಥಿತಿಗೆ ತಳ್ಳಬೇಡಿ'' ಎಂದು ಚುನಾವಣಾ ಆಯೋಗದ ವಿರುದ್ಧ ನಟ ಪ್ರಕಾಶ್ ರಾಜ್ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರ ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು. ''ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ () ಹೆಸರಿನಲ್ಲಿ ಚುನಾವಣಾ ಆಯೋಗವು ಅರ್ಹ ಮತದಾರರ ಹಕ್ಕನ್ನು ಕಸಿದುಕೊಳ್ಳುತ್ತಿದೆ'' ಎಂದು ಆರೋಪಿಸಿದರು.

''ಇನ್ನೂ ಎರಡು ವರ್ಷಗಳ ಕಾಲ ರಾಜ್ಯದಲ್ಲಿ ಯಾವುದೇ ಚುನಾವಣೆಗಳಿಲ್ಲದಿದ್ದರೂ, ಇಷ್ಟೊಂದು ಅವಸರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸುವ ಅಗತ್ಯವೇನಿತ್ತು? ಜನಸಾಮಾನ್ಯರ ಘನತೆಯನ್ನು ಹೀಗೆ ಅವಮಾನಿಸುತ್ತಿರುವುದು ಏಕೆ'' ಎಂದು ಪ್ರಕಾಶ್ ರಾಜ್ ತೀವ್ರವಾಗಿ ಪ್ರಶ್ನಿಸಿದರು.

ಚುನಾವಣಾ ಆಯೋಗದ ಧೋರಣೆಯನ್ನು ತೀವ್ರವಾಗಿ ಖಂಡಿಸಿದ ಪ್ರಕಾಶ್ ರಾಜ್, ''ಜೀವನ ನಡೆಸಲು ಜಾಗ ಬದಲಾಯಿಸುವವರಿಗೆ ಫಾರಂ ನಂ.6 ಅಲ್ಲ, ಫಾರಂ ನಂ.8 ಕೊಡಬೇಕು. ಆದರೆ, ಜಾಗ ಬದಲಾಯಿಸಿದವರ ಓಟನ್ನೇ ಕಿತ್ತುಕೊಳ್ಳಲು ನೋಡುತ್ತಿರುವ ಚುನಾವಣಾ ಆಯೋಗದ ನಿಜವಾದ ಬಣ್ಣ ರಾಜಕೀಯವಾಗಿದೆ'' ಎಂದು ವಾಗ್ದಾಳಿ ನಡೆಸಿದರು.

''ಎಲ್ಲದಕ್ಕೂ ಉತ್ತರವಾಗಿ ಫಾರಂ ನಂ.6 ತೆಗೆದುಕೊಳ್ಳಿ ಎಂದು ಹೇಳುವ ಚುನಾವಣಾ ಆಯೋಗ, ಅದಕ್ಕೆ ಕೇಳಲಾಗುತ್ತಿರುವ 13 ವಿವಿಧ ದಾಖಲಾತಿಗಳ ಅಸಲಿ ಕಥೆಯನ್ನು ಮುಚ್ಚಿಡುತ್ತಿರುವುದೇಕೆ? ಚುನಾವಣಾ ಆಯೋಗದ ಈ ಷಡ್ಯಂತ್ರ ಕರ್ನಾಟಕದ ಜನರಿಗೆ ಈಗಾಗಲೇ ಅರ್ಥವಾಗಿದೆ. ಸ್ಥಳಾಂತರವಾದವರಿಗೆ ನೋಟಿಸ್ ನೀಡಿ, ಅವರ ಅಭಿಪ್ರಾಯ ಕೇಳಿ ವಿಳಾಸ ಬದಲಾಯಿಸುವುದು ನಿಜವಾದ ಒಳಗೊಳ್ಳುವಿಕೆ. ಆದರೆ, ಹೆಸರನ್ನೇ ಡಿಲೀಟ್ ಮಾಡಿ ಮತ್ತೆ ಫಾರಂ ನಂ.6 ಕೊಡಿ ಎನ್ನುವುದು ಜನರನ್ನು ಹೊರಗುಳಿಸುವಿಕೆ. ಅಸಲಿಗೆ ಅಂದರೇನೇ ಜನರನ್ನು ಹೊರಗುಳಿಸುವ ಕುತಂತ್ರ!'' ಎಂದು ಅವರು ಆಕ್ರೋಶ ಹೊರಹಾಕಿದರು.

ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದ ಕೊಳೆಗೇರಿ ನಿವಾಸಿಗಳು ತಮಗೆ ನೀಡಲಾಗಿದ್ದ ಗಣತಿ ನಮೂನೆ ( ) ಸ್ವೀಕೃತಿ ಪತ್ರಗಳನ್ನು ಪ್ರದರ್ಶಿಸಿ ಆಯೋಗದ ಎಡವಟ್ಟುಗಳನ್ನು ಬಿಚ್ಚಿಟ್ಟರು. ''ನಾವು ನಮೂನೆ ಸಲ್ಲಿಸಿದ್ದರೂ ನಮ್ಮನ್ನು ಸ್ಥಳಾಂತರಗೊಂಡವರು ಎಂದು ಪಟ್ಟಿಗೆ ಸೇರಿಸಲಾಗಿದೆ. ಬಿಎಲ್‌ಒಗಳಿಗೆ ಪದೇಪದೇ ಕರೆ ಮಾಡಿದರೂ ಫಾರಂ ನೀಡಿಲ್ಲ. ನಮ್ಮ ಮನೆಯಲ್ಲಿ ದಿನದ 24 ಗಂಟೆಯೂ ಯಾರಾದರೂ ಇದ್ದೇ ಇರುತ್ತಾರೆ. ಹಾಗಿರುವಾಗ ಮನೆಗೆ ಯಾರೂ ಬಾರದೆ, ಗಣತಿಯನ್ನೂ ಮಾಡದೆ ನಮ್ಮನ್ನು ಶಿಫ್ಟೆಡ್ ಎಂದು ಹೇಗೆ ಕೈಬಿಟ್ಟರಿ?'' ಎಂದು ನಿವಾಸಿಗಳು ಕಿಡಿಕಾರಿದರು.

ಉತ್ತರ ಕನ್ನಡ 35 ಸರ್ಕಾರಿ ಶಾಲೆಗಳಲ್ಲಿ ಶೂನ್ಯ ದಾಖಲಾತಿ; ಗ್ರಾಮೀಣ ಶಿಕ್ಷಣಕ್ಕಿದು ಎಚ್ಚರಿಕೆಯ ಗಂಟೆ?

ಶಾಲೆಯ ಗಂಟೆ ಬಾರಿಸುವ ಸದ್ದು ಕೇಳುತ್ತಿದ್ದಂತೆ ಬಾಗಿಲು ತೆರೆದುಕೊಳ್ಳುತ್ತದೆ. ತರಗತಿ ಕೊಠಡಿಗಳಲ್ಲಿ ಶಿಕ್ಷಕರೂ ಇದ್ದಾರೆ. ಆದರೆ ಮಕ್ಕಳ ಹೆಜ್ಜೆಗಳಿಲ್ಲ, ಪ್ರಾರ್ಥನೆಯ ಧ್ವನಿಯಿಲ್ಲ, ಪಾಠದ ಸದ್ದು ಕೇಳಿಸುವುದಿಲ್ಲ. ಆಟದ ಮೈದಾನವೂ ಖಾಲಿ. ಇದು ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಸರ್ಕಾರಿ ಶಾಲೆಗಳ ವಾಸ್ತವ ಸ್ಥಿತಿ.

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಯ 35 ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಯೂ ದಾಖಲಾಗಿಲ್ಲ. ಶಾಲಾ ಶಿಕ್ಷಣ ವ್ಯವಸ್ಥೆಯ ಅಂಕಿ-ಅಂಶದಲ್ಲಿ ಇದು ಶೂನ್ಯ ದಾಖಲಾತಿ ಎಂಬ ಕೇವಲ ಒಂದೇ ಸಾಲಿನ ಮಾಹಿತಿಯಾಗಬಹುದು. ಆದರೆ ಆ ಒಂದು ಶೂನ್ಯದ ಹಿಂದೆ ಗ್ರಾಮೀಣ ಶಿಕ್ಷಣದ ಭವಿಷ್ಯ, ಪೋಷಕರ ಬದಲಾಗುತ್ತಿರುವ ಮನಸ್ಥಿತಿ, ಶಾಲೆಗಳ ನಡುವಿನ ಅಂತರ ಹಾಗೂ ಸರ್ಕಾರದ ಶಿಕ್ಷಣ ನೀತಿಯ ಕುರಿತು ಗಂಭೀರ ಪ್ರಶ್ನೆಗಳಿವೆ.



ಉತ್ತರ ಕನ್ನಡ ಶೈಕ್ಷಣಿಕ ಜಿಲ್ಲೆಯ ವ್ಯಾಪ್ತಿಯ ಐದು ತಾಲ್ಲೂಕುಗಳು ಸೇರಿದಂತೆ ಒಟ್ಟು 20 ಶಾಲೆಗಳು ಶೂನ್ಯ ದಾಖಲಾತಿ ಪಟ್ಟಿಯಲ್ಲಿದ್ದರೆ, ಘಟ್ಟದ ಮೇಲಿನ ಶಿರಸಿ ಶೈಕ್ಷಣಿಕ ಜಿಲ್ಲೆಯ ವ್ಯಾಪ್ತಿಯಲ್ಲೂ 15 ಶಾಲೆಗಳು ಇದೇ ಸ್ಥಿತಿಗೆ ತಲುಪಿವೆ.

ತಾಲ್ಲೂಕುವಾರು ನೋಡುವುದಾದರೆ ಶಿರಸಿಯಲ್ಲಿ 8, ಅಂಕೋಲಾದಲ್ಲಿ 5, ಯಲ್ಲಾಪುರದಲ್ಲಿ 5, ಭಟ್ಕಳದಲ್ಲಿ 4, ಹೊನ್ನಾವರದಲ್ಲಿ 4, ಕುಮಟಾದಲ್ಲಿ 4, ಕಾರವಾರದಲ್ಲಿ 3 ಹಾಗೂ ಸಿದ್ದಾಪುರದಲ್ಲಿ 2 ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಬಾಗಿಲು ತೆರೆಯದ ಸ್ಥಿತಿಯಲ್ಲಿವೆ.

ಇವುಗಳಲ್ಲಿ ಬಹುಪಾಲು ಸಣ್ಣ ಗ್ರಾಮಗಳ ಕಿರಿಯ ಪ್ರಾಥಮಿಕ ಶಾಲೆಗಳೇ ಆಗಿವೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು ಕೇವಲ ನಗರ ಅಥವಾ ಪಟ್ಟಣದ ಸಮಸ್ಯೆಯಷ್ಟೇ ಆಗಿರದೆ, ಅದು ಹಳ್ಳಿಯ ಕಟ್ಟಕಡೆಯ ಶಾಲೆಯ ಬಾಗಿಲಿನವರೆಗೂ ಬಂದು ನಿಂತಿದೆ ಎಂಬುದಕ್ಕೆ ಇದು ಜಿಲ್ಲೆಯ ಈ ಅಂಕಿ-ಅಂಶಗಳೇ ನೇರ ಸಾಕ್ಷಿಯಾಗಿದೆ.

ಕೆಪಿಎಸ್ ಪ್ರಭಾವ ಮತ್ತು ಸಣ್ಣ ಶಾಲೆಗಳ ಅಸ್ತಿತ್ವದ ಪ್ರಶ್ನೆ

ಗುಣಮಟ್ಟದ ಶಿಕ್ಷಣ, ಉತ್ತಮ ಮೂಲಸೌಕರ್ಯ ಮತ್ತು ತಂತ್ರಜ್ಞಾನವನ್ನು ಒಂದೇ ಸೂರಿನಡಿ ನೀಡುವ ಉದ್ದೇಶದಿಂದ ಸರ್ಕಾರವು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ಉತ್ಕೃಷ್ಟತಾ ಕೇಂದ್ರಗಳಾಗಿ ಅಭಿವೃದ್ಧಿಪಡಿಸುತ್ತಿದೆ. ಇದು ಸ್ವಾಗತಾರ್ಹವೇ ಆದರೂ, ಕೆಪಿಎಸ್‌ಗಳು ಬಲಿಷ್ಠವಾಗುತ್ತಿದ್ದಂತೆ ಅವುಗಳ ಸುತ್ತಮುತ್ತಲಿನ ಸಣ್ಣ ಸರ್ಕಾರಿ ಶಾಲೆಗಳು ದುರ್ಬಲಗೊಳ್ಳುತ್ತಿವೆಯೇ ಎಂಬ ಪ್ರಶ್ನೆ ಎದುರಾಗಿದೆ.

ಖಾಸಗಿ ಶಾಲೆಗಳತ್ತ ಪೋಷಕರ ಒಲವು, ಜನಸಂಖ್ಯೆಯಲ್ಲಿನ ಇಳಿಕೆ, ಹಳ್ಳಿಗಳಿಂದ ಕುಟುಂಬಗಳ ವಲಸೆ ಮತ್ತು ಕೆಪಿಎಸ್‌ಗಳತ್ತ ಮಕ್ಕಳ ವರ್ಗಾವಣೆ ಇವು ಸಣ್ಣ ಶಾಲೆಗಳ ದಾಖಲಾತಿಯ ಮೇಲೆ ತೀವ್ರ ಪರಿಣಾಮ ಬೀರುತ್ತಿವೆ. ಒಬ್ಬ ಅಥವಾ ಇಬ್ಬರು ವಿದ್ಯಾರ್ಥಿಗಳು ಮಾತ್ರ ಉಳಿದಾಗ, ಸಾಮಾಜಿಕ ಕಲಿಕೆ, ಆಟ, ಸ್ಪರ್ಧೆ ಮತ್ತು ಸ್ನೇಹದ ಕೊರತೆಯಿಂದಾಗಿ ಪೋಷಕರು ಮಕ್ಕಳನ್ನು ಸಮೀಪದ ದೊಡ್ಡ ಶಾಲೆಗಳಿಗೆ ಸೇರಿಸುವ ಅನಿವಾರ್ಯತೆಗೆ ಒಳಗಾಗುತ್ತಿದ್ದಾರೆ.

ಉತ್ತರ ಕನ್ನಡದ ಭೌಗೋಳಿಕ ಸವಾಲುಗಳು

ಮಕ್ಕಳು ಹೆಚ್ಚು ಇರುವ ಶಾಲೆ ಉತ್ತಮ ಎಂಬ ಕಾರಣಕ್ಕೆ ಅವರನ್ನು ದೂರದ ಶಾಲೆಗೆ ಕಳುಹಿಸಿದರೆ, ಪ್ರತಿದಿನ ಆ ದೂರವನ್ನು ಪುಟ್ಟ ಮಕ್ಕಳು ಹೇಗೆ ಭರಿಸಬೇಕು? ಉತ್ತರ ಕನ್ನಡದ ಭೌಗೋಳಿಕ ಸ್ವರೂಪವೇ ವಿಭಿನ್ನವಾಗಿದೆ. ಗುಡ್ಡಗಾಡು ಮತ್ತು ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಪ್ರಾಥಮಿಕ ಶಾಲಾ ಮಕ್ಕಳಿಗೆ ಇದು ದೊಡ್ಡ ಸವಾಲು.

ಮಳೆಗಾಲದಲ್ಲಿ ಅಬ್ಬರದ ಮಳೆ, ಕಾಡಿನ ಹಾದಿ ಮತ್ತು ಸಾರ್ವಜನಿಕ ಸಾರಿಗೆಯ ಕೊರತೆಯ ನಡುವೆ ಮೈಲುಗಟ್ಟಲೆ ಸಾಗುವುದು ಕಿರಿಯ ಪ್ರಾಥಮಿಕ ಶಾಲೆಯ ಮಗುವಿಗೆ ದೊಡ್ಡ ಸಾಹಸವೇ ಸರಿ. ಹೀಗಾಗಿ, ಶಾಲೆಯನ್ನು ಸಮೀಪದ ಕೇಂದ್ರಕ್ಕೆ ಜೋಡಿಸುವ ಮೊದಲು ಆ ಶಾಲೆಯಿಂದ ಮಕ್ಕಳ ಮನೆಗಳ ದೂರ ಮತ್ತು ಮಳೆಗಾಲದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಬೇಕಿದೆ.

ಆಡಳಿತಾತ್ಮಕ ನಿರ್ಧಾರಗಳು ಮತ್ತು ನೆಲಮಟ್ಟದ ವಾಸ್ತವ

ಶೂನ್ಯ ದಾಖಲಾತಿಯ ಶಾಲೆಗಳನ್ನು ತಕ್ಷಣವೇ ಶಾಶ್ವತವಾಗಿ ಮುಚ್ಚುವುದಿಲ್ಲ ಎಂಬುದು ಶಿಕ್ಷಣ ಇಲಾಖೆಯ ನಿಲುವಾಗಿದ್ದು, ಸದ್ಯಕ್ಕೆ ಅಂತಹ ಶಾಲೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಶಿಕ್ಷಕರನ್ನು ಅಗತ್ಯವಿರುವ ಕಡೆಗೆ ನಿಯೋಜಿಸಲಾಗುತ್ತಿದೆ. ಕಟ್ಟಡಗಳನ್ನು ಸಂರಕ್ಷಿಸಿ ಮುಂದಿನ ದಿನಗಳಲ್ಲಿ ಮರುಪ್ರಾರಂಭಿಸುವ ಅವಕಾಶ ಕಲ್ಪಿಸುತ್ತೇವೆ ಎಂಬುದು ಇಲಾಖೆಯ ಮಾತು.

ಆದರೆ, ಒಮ್ಮೆ ಶಾಲೆಯ ಬಾಗಿಲು ಮುಚ್ಚಿದರೆ ಆ ಗ್ರಾಮದೊಂದಿಗೆ ಇಲಾಖೆಯ ನೇರ ಸಂಪರ್ಕ ಕಡಿತಗೊಳ್ಳುತ್ತದೆ. ಶಿಕ್ಷಕರು ಕೇವಲ ಪಾಠ ಮಾಡುವವರಲ್ಲ; ಬದಲಾಗಿ ಅನೇಕ ಹಳ್ಳಿಗಳಲ್ಲಿ ಅವರು ಸರ್ಕಾರಿ ವ್ಯವಸ್ಥೆಯೊಂದಿಗೆ ಜನರನ್ನು ಸಂಪರ್ಕಿಸುವ ಪ್ರಮುಖ ಕೊಂಡಿಯೂ ಆಗಿದ್ದಾರೆ.

ಶಾಲೆ ಉಳಿಸುವ ನೀತಿಯಲ್ಲಿ ಬದಲಾವಣೆ ಬೇಕಿದೆ

ಈ ಸಮಸ್ಯೆಗೆ ಪೋಷಕರ ಆಯ್ಕೆ ಮಾತ್ರವೇ ಕಾರಣವಲ್ಲ. ಬದಲಾಗಿ ಗುಣಮಟ್ಟದ ಶಿಕ್ಷಣ, ಸಾರಿಗೆ ವ್ಯವಸ್ಥೆ ಮತ್ತು ಸ್ಥಳೀಯ ಪರಿಸ್ಥಿತಿಯನ್ನು ಒಟ್ಟಾಗಿ ನೋಡಬೇಕಿದೆ. ಬಹುತರಗತಿ ಬೋಧನಾ ಮಾದರಿಯನ್ನು ರೂಪಿಸುವುದು, ಸಮೀಪದ ಶಾಲೆಗಳೊಂದಿಗೆ ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು, ಡಿಜಿಟಲ್ ತರಗತಿಗಳ ಮೂಲಕ ಬೋಧನೆ ನೀಡುವುದು, ಮಳೆಗಾಲದಲ್ಲಿ ಸುರಕ್ಷಿತ ಸಾರಿಗೆ ವ್ಯವಸ್ಥೆ ಕಲ್ಪಿಸುವುದು, ಎಸ್‌ಡಿಎಂಸಿ ಹಾಗೂ ಗ್ರಾಮ ಪಂಚಾಯಿತಿಯ ಸಹಯೋಗದೊಂದಿಗೆ ಸ್ಥಳೀಯ ಯೋಜನೆ ರೂಪಿಸುವುದು ಅಗತ್ಯ.

ಶಾಲೆ ಎಂದರೆ ಕೇವಲ ನಾಲ್ಕು ಗೋಡೆಗಳಲ್ಲ; ಅದು ಹಳ್ಳಿಯ ಮಕ್ಕಳ ಮೊದಲ ಸಾರ್ವಜನಿಕ ಜಾಗ. ಈ 35 ಶಾಲೆಗಳನ್ನು ಕೇವಲ ಕಡತಗಳಾಗಿ ನೋಡದೆ, ಗ್ರಾಮೀಣ ಶಿಕ್ಷಣ ವ್ಯವಸ್ಥೆಯನ್ನು ಎಚ್ಚರಿಸುವ ಅಲಾರಂ ಎಂದು ಪರಿಗಣಿಸಬೇಕು.

ಸರ್ಕಾರದ ಮುಂದೆ ಇರುವ ಪ್ರಮುಖ ಪ್ರಶ್ನೆಗಳು

ಶೂನ್ಯ ದಾಖಲಾತಿಗೆ ತಲುಪುವ ಮುನ್ನವೇ ವಿದ್ಯಾರ್ಥಿಗಳನ್ನು ಹಾಗೂ ಶಾಲೆಗಳನ್ನು ಉಳಿಸಲು ಪ್ರತಿಯೊಂದು ಶಾಲೆಗೆ ಪ್ರತ್ಯೇಕ ಕಾರ್ಯಯೋಜನೆ ಏಕೆ ರೂಪಿಸಬಾರದು?

ಕೆಪಿಎಸ್ ಬಲಪಡಿಸುವುದರ ಜತೆಗೆ ಅದರ ಸುತ್ತಲಿನ ಸಣ್ಣ ಸರ್ಕಾರಿ ಶಾಲೆಗಳ ಅಸ್ತಿತ್ವ ಮತ್ತು ಅಗತ್ಯವನ್ನು ಹೇಗೆ ಖಾತ್ರಿಪಡಿಸಲಾಗುತ್ತದೆ?


ಶಾಲೆ ತಾತ್ಕಾಲಿಕವಾಗಿ ಸ್ಥಗಿತಗೊಂಡ ಬಳಿಕ ಮತ್ತೆ ದಾಖಲಾತಿ ಆರಂಭವಾದರೆ, ಶಾಲೆಯನ್ನು ಪುನರಾರಂಭಿಸಲು ನಿಗದಿತ ಹಾಗೂ ಸ್ಪಷ್ಟ ವ್ಯವಸ್ಥೆ ಏನು?

ಈ ಪ್ರಶ್ನೆಗಳಿಗೆ ಉತ್ತರ ಸಿಕ್ಕಾಗ ಮಾತ್ರ ಶೂನ್ಯ ದಾಖಲಾತಿ ಎಂಬುದು ಕೇವಲ ಒಂದು ತಾತ್ಕಾಲಿಕ ಸಮಸ್ಯೆಯೋ ಅಥವಾ ದೊಡ್ಡ ಬದಲಾವಣೆಯ ಆರಂಭವೋ ಎಂಬುದು ಸ್ಪಷ್ಟವಾಗಲಿದೆ. ಕೆಪಿಎಸ್‌ಗಳು ಬೆಳೆಯಲಿ, ಆಧುನಿಕ ಸೌಲಭ್ಯಗಳು ಬರಲಿ, ಆದರೆ ಅದರ ನೆರಳಲ್ಲಿ ಹಳ್ಳಿಯ ಸಣ್ಣ ಶಾಲೆಗಳು ಮಾತ್ರ ನಿಶ್ಶಬ್ದವಾಗಿ ಮರೆಯಾಗಬಾರದು.

ಹೋರ್ಮುಜ್ ಬಳಿಕ ಕಪ್ಪು-ಕೆಂಪು ಸಮುದ್ರ: ಜಾಗತಿಕ ಸಮುದ್ರ ಮಾರ್ಗಗಳ ಮೇಲೆ ನಿಯಂತ್ರಣದ ಮೇಲಾಟ

ಒಂದಕ್ಕೊಂದು ನೇರ ಸಂಬಂಧವಿಲ್ಲದ ಎರಡು ಪ್ರತ್ಯೇಕ ಯುದ್ಧಗಳು ಜಾಗತಿಕ ವ್ಯಾಪಾರವನ್ನು ಅಕ್ಷರಶಃ ಕತ್ತು ಹಿಸುಕುತ್ತಿವೆ. ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಬಿಕ್ಕಟ್ಟಿನಿಂದಾಗಿ ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರಗಳು ಬಹುತೇಕ ಬಂದ್ ಆಗುವ ಸ್ಥಿತಿಯಲ್ಲಿದ್ದರೆ, ರಷ್ಯಾ-ಉಕ್ರೇನ್ ಸಂಘರ್ಷದಿಂದ ಕಪ್ಪು ಸಮುದ್ರವು ಅಪಾಯದ ಕೂಪವಾಗಿದೆ. ಏಕಕಾಲದಲ್ಲಿ ವಿಶ್ವದ ಈ ಮೂರು ಪ್ರಮುಖ ಕಡಲ ಮಾರ್ಗಗಳು ಅಸ್ಥಿರಗೊಂಡಿರುವುದರಿಂದ ಹಡಗುಗಳ ಬಾಡಿಗೆ ದರ, ಯುದ್ಧ ಅಪಾಯದ ವಿಮಾ ವೆಚ್ಚ ಮತ್ತು ಜಾಗತಿಕ ಕಚ್ಚಾ ತೈಲ ಬೆಲೆಗಳು ಆಕಾಶ ಮುಟ್ಟುತ್ತಿವೆ. ಈ ಜಲಸಂಧಿಗಳ ಮೇಲಿನ ನಿಯಂತ್ರಣದ ಮೇಲಾಟ ಶೀಘ್ರವೇ ತಣ್ಣಗಾಗದಿದ್ದರೆ, ಜಗತ್ತು ಮತ್ತೊಂದು ಭೀಕರ ಆರ್ಥಿಕ ಕುಸಿತವನ್ನು ಎದುರಿಸುವುದು ಖಚಿತ.

2026ರ ಫೆಬ್ರವರಿ 28ರಂದು ಶುರುವಾದ ಅಮೆರಿಕ-ಇಸ್ರೇಲ್ ಮತ್ತು ಇರಾನ್ ಯುದ್ಧವು ಇಡೀ ಪ್ರಪಂಚದ ಆರ್ಥಿಕತೆಯನ್ನೇ ನಡುಗಿಸುತ್ತಿದೆ. ಈ ಯುದ್ಧದ ನೇರ ಪರಿಣಾಮವಾಗಿ, ಪ್ರಪಂಚದ ಶೇ. 20ರಷ್ಟು ತೈಲ ಸಾಗಣೆಯಾಗುವ ಅತಿ ಮುಖ್ಯ ಮಾರ್ಗ ಹೋರ್ಮುಜ್ ಜಲಸಂಧಿಯನ್ನು ಇರಾನ್ ಬಹುತೇಕ ಮುಚ್ಚಿದೆ ಅಥವಾ ತನ್ನ ಕಟ್ಟುನಿಟ್ಟಿನ ಹಿಡಿತಕ್ಕೆ ತೆಗೆದುಕೊಂಡಿದೆ. ಒಂದೆಡೆ ಹೋರ್ಮುಜ್ ಮಾರ್ಗ ಬಂದ್ ಆಗಿದ್ದರೆ, ಇನ್ನೊಂದೆಡೆ ಅದಕ್ಕೆ ಪರ್ಯಾಯವಾಗಿದ್ದ ಕೆಂಪು ಸಮುದ್ರ ( ) ಹಾಗೂ ಯುರೋಪ್-ಏಷ್ಯಾ ನಡುವಿನ ಕಪ್ಪು ಸಮುದ್ರಗಳು ( ) ಕೂಡ ಈಗ ಹೊಸ ಯುದ್ಧಭೂಮಿಗಳಾಗಿವೆ. ವಿಶ್ವದ ಪ್ರಮುಖ ಸಮುದ್ರ ಮಾರ್ಗಗಳಲ್ಲಿ ಏಕಕಾಲಕ್ಕೆ ನಡೆಯುತ್ತಿರುವ ಈ ಮೇಲಾಟವನ್ನು ತಜ್ಞರು ''ಜಲಸಂಧಿಗಳ ಯುದ್ಧ'' ( ) ಎಂದು ಕರೆಯುತ್ತಿದ್ದಾರೆ. ಇದು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಭಾರಿ ಅಲ್ಲೋಲಕಲ್ಲೋಲ ಸೃಷ್ಟಿಸಿದೆ.



ಈ ಸಮುದ್ರ ಬಿಕ್ಕಟ್ಟನ್ನು ಸರಳವಾಗಿ ಅರ್ಥಮಾಡಿಕೊಳ್ಳಲು ನಾವು ಮುಖ್ಯವಾಗಿ 3+1 ಚೋಕ್‌ಪಾಯಿಂಟ್‌ಗಳನ್ನು (ಕಿರಿದಾದ ಜಲಮಾರ್ಗಗಳು) ಗಮನಿಸಬೇಕು. ಅವೇ ಹೋರ್ಮುಜ್ ಜಲಸಂಧಿ, ಕೆಂಪು ಸಮುದ್ರದ ಬಾಬ್ ಎಲ್-ಮಂಡೇಬ್, ಸುಯೆಜ್ ಕಾಲುವೆ ಮತ್ತು ಕಪ್ಪು ಸಮುದ್ರ. ಪರ್ಷಿಯನ್ ಕೊಲ್ಲಿಯಿಂದ ಕಚ್ಚಾ ತೈಲ ಹೊರಬರಲು ಹೋರ್ಮುಜ್ ಒಂದೇ ಪ್ರಮುಖ ದಾರಿ. ಆ ದಾರಿ ಮುಚ್ಚಿದಾಗ, ಹಡಗುಗಳು ಅನಿವಾರ್ಯವಾಗಿ ಏಷ್ಯಾ-ಯುರೋಪ್ ನಡುವಿನ ಸುಲಭ ಮಾರ್ಗವಾದ ಕೆಂಪು ಸಮುದ್ರದ ಕಡೆ ಮುಖಮಾಡಿದವು. ಆದರೆ, ಇದೇ ಸಮಯದಲ್ಲಿ ರಷ್ಯಾ-ಉಕ್ರೇನ್ ಯುದ್ಧದಿಂದಾಗಿ ಕಪ್ಪು ಸಮುದ್ರವೂ ಭದ್ರತಾ ಅಪಾಯಕ್ಕೆ ಸಿಲುಕಿದೆ. ಅಂದರೆ, ಹೋರ್ಮುಜ್‌ನಲ್ಲಾದ ಒಂದು ಅಡಚಣೆ, ಜಗತ್ತಿನ ಇತರ ಪ್ರಮುಖ ಸಮುದ್ರ ಮಾರ್ಗಗಳ ಮೇಲೂ ಭಾರಿ ಒತ್ತಡ ಬೀರುವಂತಹ ಸರಪಳಿ ಪ್ರತಿಕ್ರಿಯೆಗೆ ( ) ಕಾರಣವಾಗಿದೆ.

ಆಫ್ರಿಕಾ ಮತ್ತು ಏಷ್ಯಾ ಖಂಡಗಳ ಮಧ್ಯೆ ಇರುವ ಕೆಂಪು ಸಮುದ್ರವು, ದಕ್ಷಿಣದಲ್ಲಿ ಬಾಬ್ ಎಲ್-ಮಂಡೇಬ್ ಮೂಲಕ ಹಿಂದೂ ಮಹಾಸಾಗರವನ್ನು, ಉತ್ತರದಲ್ಲಿ ಸುಯೆಜ್ ಕಾಲುವೆ ಮೂಲಕ ಮೆಡಿಟರೇನಿಯನ್ ಸಮುದ್ರವನ್ನು ಬೆಸೆಯುತ್ತದೆ. ಸೌದಿ ಅರೇಬಿಯಾ, ಯೆಮೆನ್, ಈಜಿಪ್ಟ್ ದೇಶಗಳ ಗಡಿ ಹಂಚಿಕೊಂಡಿರುವ ಇದು ಏಷ್ಯಾ-ಯುರೋಪ್ ನಡುವಿನ ಅತಿಮುಖ್ಯ ವಾಣಿಜ್ಯ ಸೇತುವೆ. ಹೋರ್ಮುಜ್ ಜಲಸಂಧಿ ಅಪಾಯಕ್ಕೆ ಸಿಲುಕಿದ ತಕ್ಷಣ, ತೈಲ ದಿಗ್ಗಜ ಸೌದಿ ಅರೇಬಿಯಾ ಒಂದು ಜಾಣ್ಮೆಯ ಹೆಜ್ಜೆ ಇಟ್ಟಿತು. ತನ್ನ ಬೃಹತ್ ಈಸ್ಟ್-ವೆಸ್ಟ್ ಪೈಪ್‌ಲೈನ್ ಬಳಸಿ, ದಿನಕ್ಕೆ 3 ರಿಂದ 7 ಮಿಲಿಯನ್ ಬ್ಯಾರೆಲ್(30 ಲಕ್ಷದಿಂದ 70 ಲಕ್ಷ ಬ್ಯಾರೆಲ್) ತೈಲವನ್ನು ಕೆಂಪು ಸಮುದ್ರದ ದಡದಲ್ಲಿರುವ ಯಾನ್ಬು ಬಂದರಿಗೆ ತಿರುಗಿಸಿತು.

ಹೋರ್ಮುಜ್‌ಗೆ ಹೋಗದೇ, ನೇರವಾಗಿ ಕೆಂಪು ಸಮುದ್ರದ ಮೂಲಕ ಜಗತ್ತಿಗೆ ತೈಲ ಪೂರೈಸುವ ಸೌದಿಯ ಈ ಲೆಕ್ಕಾಚಾರ ಆರಂಭದಲ್ಲಿ ಅತ್ಯುತ್ತಮವಾಗಿ ಕೆಲಸ ಮಾಡಿತು. ಆದರೆ, ಸೌದಿಯ ಈ ಪರ್ಯಾಯ ಮಾರ್ಗದ ಲೆಕ್ಕಾಚಾರ ಬಹಳ ದಿನ ಉಳಿಯಲಿಲ್ಲ. 2026ರ ಜುಲೈ ತಿಂಗಳಿನಿಂದ ಕೆಂಪು ಸಮುದ್ರದ ಪರಿಸ್ಥಿತಿ ತೀರಾ ಹದಗೆಟ್ಟಿತು. ಇರಾನ್ ಬೆಂಬಲಿತ ಯೆಮೆನ್‌ನ ಹೌತಿ ಬಂಡುಕೋರರು ಕೆಂಪು ಸಮುದ್ರದಲ್ಲಿ ಹೋಗುತ್ತಿದ್ದ ಸೌದಿ ತೈಲ ಟ್ಯಾಂಕರ್‌ಗಳನ್ನು ಗುರಿಯಾಗಿಸಿ ಸತತ ಕ್ಷಿಪಣಿ ದಾಳಿಗಳನ್ನು ಶುರು ಮಾಡಿದರು. ಆಗಸ್ಟ್ 5ರಂದು ಸೌದಿಯ ಬೃಹತ್ ಟ್ಯಾಂಕರ್ ಮೇಲೆ ನೇರ ದಾಳಿ ನಡೆಸಿದ ಹೌತಿಗಳು, ಸೌದಿ ಅರೇಬಿಯಾ ಮೇಲೆ ಸಮುದ್ರ ನಿರ್ಬಂಧ ( ) ವಿಧಿಸಿರುವುದಾಗಿ ಬಹಿರಂಗವಾಗಿ ಘೋಷಿಸಿದರು. ಇದರ ನೇರ ಪರಿಣಾಮವಾಗಿ, ಆ ಕಿರಿದಾದ ಬಾಬ್ ಎಲ್-ಮಂಡೇಬ್ ಜಲಸಂಧಿಯಲ್ಲಿ ಹಡಗುಗಳ ಓಡಾಟ ದಿಢೀರನೆ ಸ್ಥಗಿತಗೊಳ್ಳಲಾರಂಭಿಸಿತು. ಜುಲೈ ಅಂತ್ಯದ ವೇಳೆಗೆ ಇಲ್ಲಿನ ಹಡಗು ಸಂಚಾರದಲ್ಲಿ ಶೇ. 56ರಷ್ಟು ತೀವ್ರ ಕುಸಿತ ಕಂಡುಬಂತು.

ಸೌತ್ ಪಾರ್ಸ್ ಅನಿಲ ಫೀಲ್ಡ್ ಮೇಲೆ ಇನ್ಮೇಲೆ ದಾಳಿ ಇಲ್ಲ : ಟ್ರಂಪ್ ಹಾರ್ಮುಝ್ ಜಲಸಂಧಿಯಿಂದ 22 ಹಡಗುಗಳು ಭಾರತಕ್ಕೆ!

ಕೆಂಪು ಸಮುದ್ರದಲ್ಲಿ ಕ್ಷಿಪಣಿ ದಾಳಿಗಳು ಹೆಚ್ಚಾಗುತ್ತಿದ್ದಂತೆ, ಹಡಗು ಮತ್ತು ಸರಕು ಉಳಿಸಿಕೊಳ್ಳಲು ಹಡಗು ಕಂಪನಿಗಳು ಕಠಿಣ ನಿರ್ಧಾರ ಕೈಗೊಂಡವು. ಅನೇಕ ಬೃಹತ್ ಕಚ್ಚಾ ತೈಲ ಟ್ಯಾಂಕರ್‌ಗಳು () ಕೆಂಪು ಸಮುದ್ರದ ಸುಲಭ ಮಾರ್ಗವನ್ನು ಸಂಪೂರ್ಣವಾಗಿ ಕೈಬಿಟ್ಟವು. ಬದಲಾಗಿ, ಇಡೀ ಆಫ್ರಿಕಾ ಖಂಡವನ್ನು ಸುತ್ತುವರಿಯುವ ಅತ್ಯಂತ ದೀರ್ಘವಾದ ಕೇಪ್ ಆಫ್ ಗುಡ್ ಹೋಪ್ ( ) ಮಾರ್ಗವನ್ನು ಆಯ್ದುಕೊಂಡವು. ಇದರಿಂದ ಒಂದು ಹಡಗು ತನ್ನ ಗುರಿ ತಲುಪಲು ಹೆಚ್ಚುವರಿಯಾಗಿ 25ಕ್ಕೂ ಹೆಚ್ಚು ದಿನಗಳು ಬೇಕಾಯಿತು! ಅಷ್ಟೇ ಅಲ್ಲ, ದಾಳಿಕೋರರ ಕಣ್ಣಿಗೆ ಬೀಳದಿರಲು ಅನೇಕ ಟ್ಯಾಂಕರ್‌ಗಳು ತಮ್ಮ ಜಿಪಿಎಸ್ ಟ್ರ್ಯಾಕಿಂಗ್ ಸಿಗ್ನಲ್‌ಗಳನ್ನು ( ) ಆಫ್ ಮಾಡಿ ಕತ್ತಲಲ್ಲಿ ಕದ್ದುಮುಚ್ಚಿ ಸಾಗುವಂತಹ ಆತಂಕಕಾರಿ ಪರಿಸ್ಥಿತಿ ನಿರ್ಮಾಣವಾಯಿತು.

ತೈಲ ಸಾಗಣೆಯ ಈ ಭೀಕರ ಬಿಕ್ಕಟ್ಟು ಭಾರತದ ಇಂಧನ ಭದ್ರತೆಯ ಮೇಲೂ ಆಳವಾದ ಹಾಗೂ ನೇರ ಪರಿಣಾಮ ಬೀರಲಾರಂಭಿಸಿದೆ. ಭಾರತದ ರಿಫೈನರಿಗಳಿಗೆ ಸೌದಿ ಅರೇಬಿಯಾದಿಂದ ಕಚ್ಚಾ ತೈಲ ಹೊತ್ತು ತರುತ್ತಿದ್ದ ಎರಡು ಬೃಹತ್ ಟ್ಯಾಂಕರ್‌ಗಳು ಕೆಂಪು ಸಮುದ್ರದಲ್ಲಿ ತಮ್ಮ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಆಫ್ ಮಾಡಿಕೊಂಡೇ ಅಪಾಯದಿಂದ ಪಾರಾಗಿ ಹೊರಬಂದವು. ತನ್ನ ಒಟ್ಟು ತೈಲ ಅಗತ್ಯದ ಶೇ. 80ರಷ್ಟನ್ನು ಆಮದು ಮಾಡಿಕೊಳ್ಳುವ ಭಾರತದಂತಹ ದೇಶಕ್ಕೆ ಇದು ದೊಡ್ಡ ತಲೆನೋವು. ದೀರ್ಘ ಮಾರ್ಗದಲ್ಲಿ ಹಡಗುಗಳು ಬರುವುದರಿಂದ ಸಾಗಣೆ ವೆಚ್ಚ ವಿಪರೀತ ಹೆಚ್ಚಾಗುತ್ತದೆ. ಈ ಅನಿಶ್ಚಿತತೆಯು ಮುಂದಿನ ದಿನಗಳಲ್ಲಿ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಗೆ ಮತ್ತು ಆರ್ಥಿಕ ಹಣದುಬ್ಬರಕ್ಕೆ ಸ್ಪಷ್ಟ ಮುನ್ಸೂಚನೆ ನೀಡುತ್ತಿದೆ.

ಇತ್ತ ಮಧ್ಯಪ್ರಾಚ್ಯದಲ್ಲಿ ಈ ಬಿಕ್ಕಟ್ಟು ನಡೆಯುತ್ತಿದ್ದರೆ, ಅತ್ತ ಯುರೋಪ್ ಮತ್ತು ಏಷ್ಯಾದ ನಡುವೆ (ಯುರೇಷ್ಯಾ) ಇರುವ ಕಪ್ಪು ಸಮುದ್ರವು ರಷ್ಯಾ-ಉಕ್ರೇನ್ ಯುದ್ಧದ ವಿಸ್ತರಿತ ಯುದ್ಧರಂಗವಾಗಿ ಬದಲಾಗಿದೆ. ರಷ್ಯಾ, ಉಕ್ರೇನ್, ಟರ್ಕಿ ಮತ್ತು ರೊಮೇನಿಯಾ ದೇಶಗಳಿಂದ ಸುತ್ತುವರೆದಿರುವ ಈ ಸಮುದ್ರವು, ಟರ್ಕಿಯ ಜಲಸಂಧಿಗಳ ಮೂಲಕ ಮೆಡಿಟರೇನಿಯನ್ ಸಮುದ್ರಕ್ಕೆ ಸೇರುತ್ತದೆ. ಯುರೋಪಿಯನ್ ದೇಶಗಳ ಆರ್ಥಿಕ ನಿರ್ಬಂಧಗಳಿಂದ ತಪ್ಪಿಸಿಕೊಳ್ಳಲು ರಷ್ಯಾ ಇದೇ ಮಾರ್ಗದಲ್ಲಿ ಶ್ಯಾಡೋ ಫ್ಲೀಟ್ (ಗುಪ್ತ ಹಡಗುಗಳು) ಮೂಲಕ ರಹಸ್ಯವಾಗಿ ತೈಲ ಮಾರಾಟ ಮಾಡುತ್ತಿದೆ. ಇದನ್ನು ತಡೆಯಲು ಉಕ್ರೇನ್ ನೊವೊರೊಸ್ಸಿಸ್ಕ್ ಬಂದರು ಮತ್ತು ರಷ್ಯಾದ ವಾಣಿಜ್ಯ ಹಡಗುಗಳ ಮೇಲೆ ಸತತ ಕಡಲ ದಾಳಿಗಳನ್ನು ತೀವ್ರಗೊಳಿಸಿದ್ದು, ಇದರಿಂದ ಕಜಾಕ್‌ಸ್ತಾನದ ತೈಲ ಸಾಗಣೆಗೂ ಭಾರಿ ಪೆಟ್ಟು ಬಿದ್ದಿದೆ.

ಭೌಗೋಳಿಕವಾಗಿ ವಿಶ್ಲೇಷಿಸಿದರೆ ಕಪ್ಪು ಸಮುದ್ರವು ಹೋರ್ಮುಜ್ ಅಥವಾ ಕೆಂಪು ಸಮುದ್ರದಷ್ಟು ಅನಿವಾರ್ಯವಾದ ಚೋಕ್‌ಪಾಯಿಂಟ್ ಅಲ್ಲದಿರಬಹುದು. ಆದರೆ, ಸತತ ಮಿಲಿಟರಿ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳಿಂದಾಗಿ ಇದೀಗ ವಿಶ್ವದ ಅತ್ಯಂತ ಅಪಾಯಕಾರಿ ಯುದ್ಧವಲಯಗಳಲ್ಲಿ ಒಂದಾಗಿದೆ. ರಷ್ಯಾ ಮತ್ತು ಉಕ್ರೇನ್ ಜಗತ್ತಿನ ಅತಿ ದೊಡ್ಡ ಕೃಷಿ ಮತ್ತು ತೈಲ ರಫ್ತುದಾರರು. ಹೀಗಾಗಿ ಈ ದಾಳಿಗಳಿಂದ ಜಾಗತಿಕ ಸರಕು ಪೂರೈಕೆ ವ್ಯವಸ್ಥೆ ತೀವ್ರ ಒತ್ತಡಕ್ಕೆ ಸಿಲುಕಿದೆ. ಆಗಸ್ಟ್ ತಿಂಗಳ ವರದಿಗಳ ಪ್ರಕಾರ, ಕಪ್ಪು ಸಮುದ್ರದಲ್ಲಿ ಹಡಗು ಓಡಿಸುವ ಜೀವಬೆದರಿಕೆಯಿಂದಾಗಿ, ಸಿಪಿಸಿ () ಕಚ್ಚಾ ತೈಲ ಸಾಗಿಸುವ ಕೆಲವು ಟ್ಯಾಂಕರ್‌ಗಳ ದೈನಂದಿನ ಬಾಡಿಗೆ ದರ ( ) ಐತಿಹಾಸಿಕವಾಗಿ ಏರಿಕೆ ಕಂಡಿದ್ದು, ದಿನಕ್ಕೆ ಬರೋಬ್ಬರಿ 4,00,000 (ಸುಮಾರು 3.3 ಕೋಟಿ ರೂಪಾಯಿ) ತಲುಪಿದೆ.

ಕಪ್ಪು ಸಮುದ್ರದಲ್ಲಿ ಪ್ರತಿ ದಿನ ಹೆಚ್ಚುತ್ತಿರುವ ಈ ಭದ್ರತಾ ಅಪಾಯಗಳನ್ನು ಕಂಡು ಆತಂಕಗೊಂಡಿರುವ ಟರ್ಕಿ, ಆಗಸ್ಟ್ ಎರಡನೇ ವಾರದಲ್ಲಿ ಒಂದು ಕಠಿಣ ಹೆಜ್ಜೆ ಇಟ್ಟಿದೆ. ಕಪ್ಪು ಸಮುದ್ರದಿಂದ ಮೆಡಿಟರೇನಿಯನ್ ಸಮುದ್ರಕ್ಕೆ ಹೋಗಲು ಟರ್ಕಿಯ ಜಲಸಂಧಿಗಳೇ ದಾರಿಯಾಗಿರುವುದರಿಂದ, ಅಲ್ಲಿ ಹಾದುಹೋಗುವ ವಾಣಿಜ್ಯ ಹಡಗುಗಳ ಸಂಚಾರದ ಮೇಲೆ ಟರ್ಕಿ ಕಟ್ಟುನಿಟ್ಟಿನ ಭದ್ರತಾ ತಪಾಸಣೆಗಳನ್ನು ಹೇರಿದೆ. ಸಂಚಾರವನ್ನು ಸಂಪೂರ್ಣ ಬಂದ್ ಮಾಡದಿದ್ದರೂ, ಭದ್ರತಾ ಕಾರಣಗಳಿಂದ ಹಡಗುಗಳ ಪ್ರಯಾಣ ತಡವಾಗುತ್ತಿದೆ. ಜಾಗತಿಕ ವ್ಯಾಪಾರಕ್ಕೆ ಆಗುತ್ತಿರುವ ಅಪಾರ ಹಾನಿಯನ್ನು ತಪ್ಪಿಸಲು, ವಾಣಿಜ್ಯ ಹಡಗುಗಳು ಹಾಗೂ ತೈಲ ಟರ್ಮಿನಲ್‌ಗಳ ಮೇಲೆ ದಾಳಿ ಮಾಡುವುದನ್ನು ತಕ್ಷಣವೇ ನಿಲ್ಲಿಸುವಂತೆ ಟರ್ಕಿ ಸರ್ಕಾರ ರಷ್ಯಾ ಮತ್ತು ಉಕ್ರೇನ್‌ಗೆ ತುರ್ತು ಮನವಿ ಮಾಡಿದೆ.

ಒಂದಕ್ಕೊಂದು ನೇರ ಸಂಬಂಧವಿಲ್ಲದ ಎರಡು ಪ್ರತ್ಯೇಕ ಯುದ್ಧಗಳು ಜಾಗತಿಕ ವ್ಯಾಪಾರವನ್ನು ಅಕ್ಷರಶಃ ಕತ್ತು ಹಿಸುಕುತ್ತಿವೆ. ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಬಿಕ್ಕಟ್ಟಿನಿಂದಾಗಿ ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರಗಳು ಬಹುತೇಕ ಬಂದ್ ಆಗುವ ಸ್ಥಿತಿಯಲ್ಲಿದ್ದರೆ, ರಷ್ಯಾ-ಉಕ್ರೇನ್ ಸಂಘರ್ಷದಿಂದ ಕಪ್ಪು ಸಮುದ್ರವು ಅಪಾಯದ ಕೂಪವಾಗಿದೆ. ಏಕಕಾಲದಲ್ಲಿ ವಿಶ್ವದ ಈ ಮೂರು ಪ್ರಮುಖ ಕಡಲ ಮಾರ್ಗಗಳು ಅಸ್ಥಿರಗೊಂಡಿರುವುದರಿಂದ ಹಡಗುಗಳ ಬಾಡಿಗೆ ದರ, ಯುದ್ಧ ಅಪಾಯದ ವಿಮಾ ವೆಚ್ಚ ಮತ್ತು ಜಾಗತಿಕ ಕಚ್ಚಾ ತೈಲ ಬೆಲೆಗಳು ಆಕಾಶ ಮುಟ್ಟುತ್ತಿವೆ. ಈ ಜಲಸಂಧಿಗಳ ಮೇಲಿನ ನಿಯಂತ್ರಣದ ಮೇಲಾಟ ಶೀಘ್ರವೇ ತಣ್ಣಗಾಗದಿದ್ದರೆ, ಜಗತ್ತು ಮತ್ತೊಂದು ಭೀಕರ ಆರ್ಥಿಕ ಕುಸಿತವನ್ನು ಎದುರಿಸುವುದು ಖಚಿತ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR